MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 ಸಂಚಿಕೆ: 226 ಭಾನುವಾರ : 22-06-2025 ರಾಯಚೂರು RNI NO: KARKAN/2022/90446 ಪುಟ: 4 ಬೆಲೆ: ರೂ: 2-00

VOLUME: 04 ISSUE: 226 SUNDAY : 22-06-2025 RAICHUR EMAIL: YUVAMARGA@GMAIL.COM PAGE: 4 PRICE: Rs: 2-00

## ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ : ವೀರನಗೌಡ ಲೆಕ್ಕಿಗಾಳ




**ಲಿಂಗಸುಗೂರು,ಜೂ.21–** ಧರ್ಮದ ಆಧಾರದ ಮೇಲೆ ಮೀಸಲಾತಿ ನೀಡಬಾರದೆಂದು ಡಾ.ಬಾಬಾ ಸಾಹೇಬ ಅಂಬೇಡ್ಕರ್‌ರವರು ಸಂವಿಧಾನದಲ್ಲಿ ಬರೆದಿದ್ದಾರೆ. ಅಲ್ಲದೇ ಧರ್ಮದ ಆಧಾರದ ಮೇಲೆ ಮೀಸಲಾತಿಯನ್ನು ಅಂಬೇಡ್ಕರ್‌ರವರು ವಿರೋಧಿಸಿದ್ದರು. ಮಾತು ಮಾತಿಗೆ ಕಾಂಗ್ರೆಸ್ ಪಕ್ಷದವರು ಅಂಬೇಡ್ಕರ್ ವಾದಿಗಳು ಹೇಳಿಕೊಂಡು ಅವರ ಆಶಯಗಳನ್ನು ಮಣ್ಣಪಾಲು ಮಾಡುತ್ತಿದ್ದಾರೆಂದು ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನು ನಡೆಸಿ ಮಾತನಾಡಿದ ಅವರು, ಮುಸ್ಲಿಂ ಸಮುದಾಯಕ್ಕೆ ಧರ್ಮದ ಆಧಾರದ ಮೇಲೆ ಮನೆಗಳನ್ನು ಹೆಚ್ಚುವರಿಯಾಗಿ ಕೊಡುವುತ್ತಿರುವುದು ಯಾವ ಉದ್ದೇಶಕ್ಕಾಗಿ ಎಂದು ಪ್ರಶ್ನಿಸಿದರು. ಕಾಂಗ್ರೆಸ್ ಸರ್ಕಾರ ಹಗರಣಗಳ ಮೇಲೆ ಹಗರಣಗಳನ್ನು ಮಾಡುತ್ತಾ ಬರುತ್ತಿದೆ. ಹಗರಣಗಳು ಬೆಳಕಿಗೆ ಬಂದಾಗ ಜಾತಿ ಗಣತಿಯನ್ನು ಮುನ್ನೆಲೆ ತರುತ್ತಿದ್ದೀರಿ. ಯಾವಾಗ ಹಗಣರಗಳು ಬರುತ್ತವೆಯೋ ಹಗರಣಗಳನ್ನು ಮುಚ್ಚಿಹಾಕಲು ಜಾತಿ ಧರ್ಮವನ್ನು ಎಳೆದು ತರುವುದು ಕಾಂಗ್ರೆಸ್ ಪಕ್ಷ ಮಾಡುತ್ತಿದೆ ಎಂದು ಆರೋಪಿಸಿದರು.

ಜನ ಸಾಮಾನ್ಯರಿಗೆ ನೆರವಾಗುವ ನಿಟ್ಟಿನಲ್ಲಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆಂದು ಸರಕಾರ ರಾಜ್ಯದ ಬೊಕ್ಕಸವನ್ನು ಲೂಟಿ ಮಾಡುತ್ತಿದೆ. ರಾಜ್ಯದಲ್ಲಿ ಅರಾಜಕತೆ ತಾಂಡವವಾಡುತ್ತಿದೆ.

ವಸತಿ ಯೋಜನೆ ಅಕ್ರಮದ ಬಗ್ಗೆ ಖುದ್ದು ಕಾಂಗ್ರೆಸ್ ಶಾಸಕರೇ ಸರಕಾರದ ವಿರುದ್ಧ ಕಿಡಿ ಕಾರಿದ್ದಾರೆ. ಕಾಲ್ತುಳಿತ ಪ್ರಕರಣ ಮುಚ್ಚಿಹಾಕಲು ಜಾತಿ ಜನ ಗಣತಿ ಮಾಡುವುದಾಗಿ ಜನರ ಗಮನ ಬೇರೆಡೆಗೆ ಸೆಳೆಯಲು ಯತ್ನಿಸಿರುವದು ಖಂಡನೀಯ. ಯಾವುದೇ ಇಲಾಖೆಯಲ್ಲಿ ಅನುದಾನವಿಲ್ಲದೇ ಟೆಂಡರ್ ಪಡೆದು ಕೆಲಸ ಮಾಡಿರುವ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದಿದೆ. ಕೆಕೆಆರ್ಡಿಬಿ ಹೊರತು ಪಡಿಸಿ ಯಾವ 2ನೇ ಪುಟಕ್ಕೆ

## ಶಾಲೆಗಳಲ್ಲಿ ಯೋಗ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು : ರಾಜ್ಯಪಾಲ ಗೆಹ್ಲೋಟ್

**ಬೆಂಗಳೂರು, ಜೂ.21–** ಯೋಗವು ದೇಹ ಮತ್ತು ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಲು ಅನುಕೂಲವಾಗಿದ್ದು, ಯೋಗಾಭ್ಯಾಸ ಮಾಡುವುದನ್ನು ರೂಢಿಸಿಕೊಳ್ಳಬೇಕು ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋಟ್ ತಿಳಿಸಿದರು.ಆಯುಷ್ ಇಲಾಖೆ ವತಿಯಿಂದ ವಿಧಾನಸೌಧದ ಮುಂಭಾಗದ ಭವ್ಯ ಮೆಟ್ಟಿಲುಗಳ ಮೇಲೆ ಹಮ್ಮಿಕೊಂಡಿದ್ದ 11ನೇ ಅಂತಾರಾಷ್ಟ್ರೀಯ ದಿನಾಚರಣೆಯನ್ನು ಔಷಧಿ ಸಸ್ಯಕ್ಕೆ ನೀರೆರುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲರಿಗೂ ನಮಸ್ಕಾರ ಎಂದು ಕನ್ನಡದಲ್ಲೇ ಸ್ವಾಗತ ಕೋರಿದ ಅವರು, ಆರೋಗ್ಯವನ್ನು ಕಾಪಾಡಿಕೊಳ್ಳಲು ದಿನನಿತ್ಯ ಯೋಗಾಭ್ಯಾಸ ಮಾಡಿದರೆ ಒಳ್ಳೆಯದು. ಆರೋಗ್ಯವನ್ನು ಉತ್ತಮಪಡಿಸಿಕೊಳ್ಳಲು ಯೋಗ ಸಹಕಾರಿಯಾಗಿದೆ. ಯೋಗ



ಬಲವನಿಗೆ ರೋಗವಿಲ್ಲ ಎಂದು ಹೇಳಿದರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಲವು ರಾಷ್ಟ್ರಗಳು ಯೋಗವನ್ನು ಅಲವಡಿಸಿಕೊಂಡಿವೆ. 11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಒಂದು ಭೂಮಿ ಒಂದು ಆರೋಗ್ಯಕ್ಕಾಗಿ ಎಂಬ ಘೋಷವಾಕ್ಯದೊಂದಿಗೆ ಆಚರಿಸಲಾಗುತ್ತಿದೆ. ರಾಜ್ಯ ಸರ್ಕಾರ ಯೋಗ ಕಾರ್ಯಕ್ರಮ ಆಯೋಜಿಸಿರುವುದಕ್ಕೆ ಅಭಿನಂದಿಸುತ್ತೇನೆ.

ಇಂದಿನಿಂದ ಯೋಗಾಭ್ಯಾಸ ಮಾಡುವುದಾಗಿ ತಿಳಿಸಿದರು. ವಿಧಾನಪರಿಷತ್ ಸಭಾಪತಿ ಬಸವರಾಜ್ ಹೊರಟಿ ಮಾತನಾಡಿ, ಯೋಗಾಭ್ಯಾಸವನ್ನು ಮನೆಗಳಲ್ಲಿ ಅಭ್ಯಾಸ ಮಾಡಬೇಕು. ನಾನು ಶಿಕ್ಷಣ ಸಚಿವನಾಗಿದ್ದಾಗ ಮಕ್ಕಳಿಗೆ ಯೋಗಾಭ್ಯಾಸ ಕಡ್ಡಾಯ ಮಾಡಲಾಗಿತ್ತು. ಪ್ರಾಥಮಿಕ ಶಾಲೆಯಿಂದ 10ನೇ ತರಗತಿಯವರೆಗೆ 2ನೇ ಪುಟಕ್ಕೆ

## ಯೋಗದಿಂದ ಮನಸ್ಸು ಸದೃಢ : ಶ್ರೀನಿವಾಸ ಅಮ್ಮಾಪೂರ

**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು,ಜೂ.21–** ಯೋಗವು ಮನಸ್ಸು, ದೇಹ ಮತ್ತು ಭೂಮಿಯನ್ನು ಸಂಪರ್ಕಿಸುತ್ತದೆ. ಈ ವರ್ಷದ "ಒಂದು ಭೂಮಿಗಾಗಿ ಯೋಗ, ಒಂದು ಆರೋಗ್ಯ" ಎಂಬ ಥೀಮ್ ವೈಯಕ್ತಿಕ ಯೋಗಕ್ಷೇಮ ಮತ್ತು ಜಾಗತಿಕ ಸುಸ್ಥಿರತೆಯಲ್ಲಿ ಅದರ ಪಾತ್ರವನ್ನು ಎತ್ತಿ ತೋರಿಸುತ್ತದೆ. ಸಾಮೂಹಿಕ ಕಾರ್ಯಕ್ರಮಗಳು, ಪರಿಸರ ಅಭಿಯಾನಗಳು ಸಮತೋಲಿತ, ಪರಿಸರ ಪ್ರಜ್ಞೆಯ ಜೀವನಕ್ಕಾಗಿ ಜನರು ಯೋಗವನ್ನು ದೈನಂದಿನ ಅಭ್ಯಾಸವಾಗಿ ಅಳವಡಿಸಿಕೊಳ್ಳಬೇಕೆಂದು ಶ್ರೀನಿವಾಸ ಅಮ್ಮಾಪೂರು ಹೇಳಿದರು.

ಪಟ್ಟಣದ ಪದವಿಪೂರ್ವ ಕಾಲೇಜು ಮೈದಾನದಲ್ಲಿ ವಿಶ್ವ ಯೋಗ ದಿನಾಚರಣೆ ಪ್ರಯುಕ್ತ ಪತಾಂಜಲಿ ಯೋಗ ಸಮಿತಿ ಹಾಗೂ ಶ್ರೀಸಂಜೀವಿನಿ ಯೋಗ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ವಿಶ್ವ ಯೋಗ ದಿನಾಚರಣೆ 5 ದಿನಗಳ ಯೋಗ ಶಿಬಿರದ



ಸಮಾರೋಪ ಸಮಾರಂಭ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು, ಯೋಗವು ಭಾರತೀಯರ ಸಾಂಪ್ರದಾಯಿಕ ಅಭ್ಯಾಸವಾಗಿದ್ದು, ಜನರು ಸಮತೋಲನ, ಶಾಂತತೆ ಮತ್ತು ದೈಹಿಕವಾಗಿ ಉತ್ತಮ ಸ್ಥಿತಿಯಲ್ಲಿರಲು ಸಹಾಯ ಮಾಡುತ್ತದೆ. ಒಂದು ಭಂಗಿ, ಒಂದು ಉಸಿರು, ಒಂದೊಂದು ಕ್ಷಣ, ಯೋಗವು ನಿಮ್ಮ ಜೀವನವನ್ನು ಮತ್ತು ನಿಮ್ಮ ಸುತ್ತಲಿನ ಪ್ರಪಂಚವನ್ನು ಹೇಗೆ ಬದಲಾಯಿಸುತ್ತದೆ ಎಂದರು.

ಈ ಸಂದರ್ಭದಲ್ಲಿ ಅಯ್ಯಪ್ಪ ವಕೀಲರು ಬಸವರಾಜ ಕರಡಿ, ಟಿ.ಶರಣಪ್ಪ ಸೌಟ ಗೈಡ್, ಬಸವಲಿಂಗಯ್ಯ ಹಿರೇಮಠ್, ಅಶೋಕ ಬಿಜಾಪುರ, ಭೀಮನಗೌಡ ಯೋಗ ಶಿಕ್ಷಕರು, ಮಲ್ಲಿಕಾರ್ಜುನ ಗೌಡ, ವೆಂಕಣ್ಣ ಕೊಂಪಲ್, ಸುರಕ್ಷಾ ಹಿರೇಮಠ್ ಹಾಗೂ ಯೋಗ ಶಿಬಿರಾರ್ಥಿಗಳು ಇದ್ದರು.

## ಅಕ್ರಮ ಗಣಿಗಾರಿಕೆ : ಸಿಎಂಗೆ ಸಚಿವ ಎಚ್.ಕೆ.ಪಾಟೀಲ್ ಪತ್ರ



**ಬೆಂಗಳೂರು,ಜೂ.21–** ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಹೈದ್ರಾಬಾದ್‌ನ ಸಿಬಿಐ ವಿಶೇಷ ನ್ಯಾಯಾಲಯ ಬಿಜೆಪಿ ಶಾಸಕ ಹಾಗೂ ಮಾಜಿ ಸಚಿವ ಗಾಲಿ ಜನಾರ್ದನರೆಡ್ಡಿ ಸೇರಿದಂತೆ ಇತರರನ್ನು ಘೋಷಿತ ಅಪರಾಧಿಗಳು ಎಂದು ಪ್ರಕಟಿಸಿ ಶಿಕ್ಷೆ ವಿಧಿಸಿದ ಬೆನ್ನಲ್ಲೆ ರಾಜ್ಯದಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ಗಂಭೀರತೆ ಹೆಚ್ಚಿದ್ದು, ಇದಕ್ಕೆ ಪೂರಕವಾಗಿ ಸಚಿವ ಎಚ್.ಕೆ.ಪಾಟೀಲ್‌ರವರು ಮುಖ್ಯಮಂತ್ರಿಯವರಿಗೆ ಬರೆದಿರುವ ಪತ್ರ ಸಂಚಲನ ಸೃಷ್ಟಿಸಿದೆ. ಸುಮಾರು 7 ಪುಟಗಳ ಸುದೀರ್ಘ ಪತ್ರದಲ್ಲಿ ಅಂಕಿ ಅಂಶಗಳು, ಕಾನೂನಾತಕ ವಿಚಾರಗಳು, ಸಾಮಾಜಿಕ ಸ್ವಾಸ್ಥ್ಯ ಕಾಳಜಿ, ರಾಜ್ಯಕ್ಕಾದ ನಷ್ಟ ಮತ್ತು ಅಪಕೀರ್ತಿ ಬಗ್ಗೆ ಎಚ್.ಕೆ.ಪಾಟೀಲ್ ಎಳೆಎಳೆಯಾಗಿ ವಿವರಿಸಿದ್ದಾರೆ.ಈ ಮೂಲಕ ಅಕ್ರಮ ಗಣಿಗಾರಿಕೆ ಬಗ್ಗೆ ಮತ್ತೊಂದು ಸುತ್ತಿನ ಗಂಭೀರ ಚರ್ಚೆ ಆರಂಭವಾಗಿದ್ದು, ವಿಚಾರಣೆ ಹಾಗೂ ಕಾನೂನಾತಕ ಪ್ರಕ್ರಿಯೆಗಳು ಚುರುಕು ಪಡೆದುಕೊಂಡಿವೆ.

2007 ರಿಂದ 2011 ರವರೆಗೆ ರಾಜ್ಯವಿದ್ರೋಹದ ಅಕ್ರಮ ಗಣಿಗಾರಿಕೆ ನಡೆದಿದ್ದು, ಅಧಿಕಾರಸ್ಥ ರಾಜಕಾರಣಿಗಳು, ಅಧಿಕಾರಶಾಹಿಗಳು ಅಕ್ರಮ ಕೂಟ ರಚಿಸಿಕೊಂಡು ಸಂಘಟಿತ ಅಪರಾಧದ ಮೂಲಕ ರಾಜ್ಯದ ನೈಸರ್ಗಿಕ ಸಂಪತ್ತನ್ನು ಹಗಲು, ರಾತ್ರಿ ಲೂಟಿ ಹೊಡೆದಿದ್ದಾರೆ.ಅಕ್ರಮ ಗಣಿಗಾರಿಕೆಯಿಂದ 1.50 ಲಕ್ಷ ಕೋಟಿ ರೂ. ನಷ್ಟ ಸಂಭವಿಸಿತ್ತು ಎಂದು ವಿವರಿಸಿದ್ದಾರೆ.2013 ರಿಂದ 2018ರ ನಡುವೆ ತಮ ಅಧ್ಯಕ್ಷತೆಯ ಸಚಿವ ಸಂಪುಟ ಉಪಸಮಿತಿ ಅಧ್ಯಯನ ನಡೆಸಿದಾಗ 2006 ರಿಂದ 2009ರ ಡಿಸೆಂಬರ್‌ವರೆಗೆ 12,891 ಪ್ರಕರಣಗಳು, 2010 ರಿಂದ 2011 ರ ನಡುವೆ 6,476 ಅಕ್ರಮ ಗಣಿಗಾರಿಕೆ ಪ್ರಕರಣಗಳು ವರದಿಯಾಗಿದ್ದವು. ಕಬ್ಬಿಣದ ಅದಿರಿನ ಕುರಿತು ಸರಿಯಾದ ಲೆಕ್ಕ ನಿರ್ವಹಿಸಿಲ್ಲ. ಇಂತಹ ವಿದ್ರೋಹಿ ಗುಂಪು ಸ್ವಾರ್ಥ ಸಾಧನೆಗೆ ಸಂಪತ್ತು ಲೂಟಿ ಮಾಡಿ ಅಟ್ಟಹಾಸದ ಕುಹಕ ನಗೆ ಬೀರುತ್ತಿದೆ ಎಂದು ಹೇಳಿದ್ದಾರೆ.

ಈ ಹಿಂದೆ ಅಕ್ರಮ ಗಣಿಗಾರಿಕೆ ವಿರುದ್ಧ ಪಾದಯಾತ್ರೆ ನಡೆಸಿದ್ದನ್ನು ಸರಿಸಿರುವ ಎಚ್.ಕೆ.ಪಾಟೀಲ್‌ರವರು 2010 ರಲ್ಲಿ ವಿವಿಧ ತನಿಖೆಗಳಿಗೆ ಪ್ರಕರಣಗಳನ್ನು ವಹಿಸಲಾಗಿತ್ತು. ಆರಂಭದಲ್ಲಿ ಇದು ರಾಜಕೀಯ ಪ್ರೇರಿತ ಆರೋಪ ಎಂಬ ಪ್ರತ್ಯುತ್ತರಗಳಿದ್ದವು. 18 ವರ್ಷಗಳ ನಂತರ ಅಪರಾಧಿಗಳಿಗೆ ಶಿಕ್ಷೆ ವಿಧಿಸಿರುವುದರಿಂದ ಪ್ರಕರಣದಲ್ಲಿ ಸತ್ಯಾಂಶವಿದೆ. ದೊಡ್ಡ ಲೂಟಿಯಾಗಿದೆ ಎಂದು ಎಲ್ಲರೂ ಆಶ್ಚರ್ಯ ಪಡುತ್ತಿದ್ದಾರೆ. ಆದರೆ ಲೂಟಿಯಾಗಿರುವ ಸಂಪತ್ತನ್ನು ರಾಜ್ಯದ 2ನೇ ಪುಟಕ್ಕೆ

# ಮಾನ್ವಿಯಲ್ಲಿ ವಿವಿಧೆಡೆ ಯೋಗ ದಿನಾಚರಣೆ



**ಯುವ ಮಾರ್ಗ ಸುದ್ದಿ**

**ಮಾನ್ವಿ,ಜೂ.21–**ಪಟ್ಟಣದ ವಾರ್ಡ್ ನಂ 4ರಲ್ಲಿರುವ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ನಮಾಜಗೇರಿಗುಡ್ಡದಲ್ಲಿ ಇಂದು ವಿಶ್ವ ಯೋಗ ದಿನಾಚರಣೆಯನ್ನು ಸರಳ ಮತ್ತು ಅರ್ಥಪೂರ್ಣವಾಗಿ ಆಚರಿಸಲಾಯಿತು. ವಿದ್ಯಾರ್ಥಿಗಳಿಗೆ ಯೋಗದ ಮಹತ್ವವನ್ನು ತಿಳಿಸುವ ಜೊತೆಗೆ ವಿವಿಧ ಆಸನಗಳನ್ನು ಪ್ರದರ್ಶಿಸುವ ಮೂಲಕ ಈ ದಿನವನ್ನು ಸ್ಮರಣೀಯಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ವಾರ್ಡ್ ನ ಪುರಸಭಾ ಸದಸ್ಯರಾದ ಶರಣಪ್ಪ ಮೇದಾ ಅವರು ಭಾಗವಹಿಸಿ, ಯೋಗದ ಮಹತ್ವದ ಬಗ್ಗೆ ಮಾತನಾಡಿದರು. ಎಲ್ಲಾ ಮಕ್ಕಳು ಸದೃಢ ಆರೋಗ್ಯ ಮತ್ತು ಏಕಾಗ್ರತೆಯನ್ನು ಸಾಧಿಸಲು ಯೋಗಾಭ್ಯಾಸ ಮಾಡಬೇಕು ಎಂದು ಸಲಹೆ ನೀಡಿದ ಅವರು, ನಮ್ಮ ದೇಶದ ಶ್ರೀಮಂತ ಪರಂಪರೆಯನ್ನು ಉಳಿಸಿ ಬೆಳೆಸುವ ಅಗತ್ಯವನ್ನು ಒತ್ತಿ ಹೇಳಿದರು. ಈ ಸಂದರ್ಭದಲ್ಲಿ ಅವರು ಯೋಗ ದಿನದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು.

2ನೇಪುಟಕ್ಕೆ



**ಯುವ ಮಾರ್ಗ ಸುದ್ದಿ**

**ಮಾನ್ವಿ,ಜೂ.21–** ತಾಲೂಕಿನ ನ್ಯಾಯಾಲಯದ ಆವರಣದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.ಕಾರ್ಯಕ್ರಮದ ಕುರಿತು ಮಾತನಾಡಿದ ಹಿರಿಯ ಶ್ರೇಣಿ ನ್ಯಾಯಾಧೀಶರಾದ ಶಿವರಾಜ ವಿ ಸಿದ್ದೇಶ್ವರ ಯೋಗದಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿ ಆಗುತ್ತದೆ. ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಯೋಗಭ್ಯಾಸವನ್ನು ಅಳವಡಿಸಿಕೊಳ್ಳಬೇಕು. ಯೋಗದಿಂದ ದೇಹ ಮತ್ತು ಮನಸ್ಸನ್ನು ಒಂದು ಗೂಡಿಸಬಹುದಾಗಿದೆ, ಯೋಗವು ಉತ್ತಮ ಆರೋಗ್ಯ ಮತ್ತು ಯೋಗ ಕ್ಷೇಮವನ್ನು ನೀಡುವುದರೊಂದಿಗೆ ಆರೋಗ್ಯಕರ ಜೀವನವನ್ನು ನೀಡುತ್ತದೆ. ಯೋಗದಿಂದ ನಿತ್ಯ ಜೀವನದಲ್ಲಿ ಸಮತೋಲನ ಕೌಶಲ್ಯ ಬೆಳೆಯುತ್ತದೆ ದೈಹಿಕ ನಿಷ್ಕ್ರಿಯತೆಯನ್ನು ಕಡಿಮೆ ಮಾಡಿ ಒತ್ತಡ ರಹಿತ ಜೀವನವನ್ನು ನಡೆಸಬಹುದಾಗಿದೆ. ಯೋಗ ನಮ್ಮೆಲ್ಲರ ಬದುಕಿನ ಭಾಗವಾಗಲಿ ಎಂದು ಹೇಳಿದರು.

ಈ ಸಂಧರ್ಭದಲ್ಲಿ ನ್ಯಾಯಾಧೀಶರಾದ ಆನಂದ ಎಚ್ ಕೊಣ್ಣೂರ, ವಕೀಲರ ಸಂಘದ ಅಧ್ಯಕ್ಷರಾದ ರವಿಕುಮಾರ ಪಾಟೀಲ್, ಪ್ರಧಾನ 2ನೇಪುಟಕ್ಕೆ



**ಯುವ ಮಾರ್ಗ ಸುದ್ದಿ**

**ಮಾನ್ವಿ,ಜೂ.21–** ಅಂತರಾಷ್ಟ್ರೀಯ ಯೋಗ ದಿನದ ಅಂಗವಾಗಿ ಆಶಾ ಕಾರ್ಯಕರ್ತೆಯರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಯೋಗ ಮತ್ತು ಅದರ ಮಹತ್ವದ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಹಿರೇಕೊಟ್ನಕಲ್ ನಲ್ಲಿ ಯೋಗ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಕುರಿತು ಡಾಕ್ಟರ ಹನುಮೇಶ ನಾಯಕ ಆಶಾ ಕಾರ್ಯಕರ್ತೆಯರಿಗೆ ಮತ್ತು ಆರೋಗ್ಯ ಸಿಬ್ಬಂದಿ ವರ್ಗದವರಿಗೆ ಯೋಗದ ಮಹತ್ವದ ಕುರಿತು ಆರೋಗ್ಯ ಶಿಕ್ಷಣ ನೀಡುತ್ತಾ ಯೋಗದಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿ ಆಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಹಾಗೂ ಸಾರ್ವಜನಿಕರು ತಮ್ಮ ಜೀವನದಲ್ಲಿ ಯೋಗಭ್ಯಾಸವನ್ನು ಅಳವಡಿಸಿಕೊಳ್ಳಬೇಕು. ಯೋಗದಿಂದ ದೇಹ ಮತ್ತು ಮನಸ್ಸನ್ನು ಒಂದುಗೂಡಿಸಬಹುದಾಗಿದೆ. ಯೋಗ ಅಂದರೆ ಸಂಸ್ಕೃತ ಭಾಷೆಯಿಂದ ಬಂದಿರುವಂಥದ್ದು ಯೋಗ ಎಂದರೆ ಸೇರುವುದು ಮತ್ತು ಒಗ್ಗೂಡುವಿಕೆ ಎಂಬ ಅರ್ಥವಾಗಿದೆ. ಯೋಗದಿಂದ ಸ್ವಯಂ 2ನೇ ಪುಟಕ್ಕೆ

## ಮೊದಲನೇಯ ಪುಟದಿಂದ

# ಶಾಲೆಗಳಲ್ಲಿ ಯೋಗ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು : ರಾಜ್ಯಪಾಲ ಗೆಹ್ಲೋಟ್

ಯೋಗ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು. ಈ ಸಂಬಂಧ ಮುಖ್ಯಮಂತ್ರಿ ಅವರೊಂದಿಗೆ ಮಾತನಾಡೋಣ ಎಂದರು. ಶಾಲಾ ಮಕ್ಕಳಿಗೆ ಯೋಗ ಕಲಿಸುವುದರಿಂದ ಒಳ್ಳೆಯದಾಗುತ್ತದೆ. ಶಾಲೆಗಳಲ್ಲಿ ದೈಹಿಕ ಶಿಕ್ಷಕರ ಕೊರತೆ ಇದ್ದು ಭರ್ತಿ ಮಾಡಬೇಕು. 29 ಸಾವಿರ ಶಿಕ್ಷಕರ ಕೊರತೆ ಇದ್ದು, ಕೆಲವು ಕಡೆ ಶಾಲೆಗಳಲ್ಲಿ ಮ ಕ್ಕಳ ಸಂಖ್ಯೆ ಕಡಿಮೆ ಇದೆ. ಈ ಸಂಬಂಧ ಶಿಕ್ಷಣ ಸಚಿವ ಹಾಗೂ ಮುಖ್ಯಮಂತ್ರಿ ಜೊತೆ ಮಾತನಾಡುತ್ತೇನೆ ಹಾಗೂ ಶಾಲೆಗಳಲ್ಲಿ ಯೋಗ ಕಡ್ಡಾಯ ಮಾಡುವ ಬಗ್ಗೆ ಸಿಎಂಗೆ ಪತ್ರ ಬರೆಯಲಾಗುವುದು ಎಂದು ಹೇಳಿದರು.

ಮೈಸೂರಿಗೆ ಯೋಗ ಜಿಲ್ಲೆ ಗರಿ: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಮೈಸರನ್ನೂ ಯೋಗ ಜಿಲ್ಲೆಯನ್ನಾಗಿ ಘೋಷಣೆ ಮಾಡುವುದಕ್ಕೆ ಚಿಂತನೆ ನಡೆಸಲಾಗಿದ್ದು, ಯೋಗಬಂಧುಗಳ ಸಹಕಾರ ಇದಕ್ಕೆ ಅಗತ್ಯವಿದೆ. ಯೋಗದ ಪ್ರಯೋಜನವನ್ನು ಎಲ್ಲರೂ ಪಡೆಯಬೇಕು ಎಂದರು. ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು 5 ಸಾವಿರ ಶಾಲೆಗಳಲ್ಲಿ ಹಮ್ಮಿಕೊಳ್ಳಲಾಗಿದೆ. ತಾಲ್ಲೂಕು ಜಿಲ್ಲಾ ಕೇಂದ್ರಗಳಲ್ಲೂ ನಡೆಸಲಾಗುತ್ತಿದೆ. ಯುವಕರ ದೈಹಿಕ, ಮಾನಸಿಕ ಆರೋಗ್ಯದ ಬಗ್ಗೆ ಯೋಗ ತರಬೇತಿ ನೀಡಲಾಗುವುದು. ಹಸಿರು ಯೋಗ ಕಾರ್ಯಕ್ರಮದ ಮೂಲಕ ಅರಣ್ಯ ಇಲಾಖೆ ಜೊತೆಗೂಡಿ ಒಂದು ಲಕ್ಷ ಗಿಡಗಳನ್ನು ನೆಡಲಾಗುವುದು ಎಂದು ಹೇಳಿದರು.

ಜಿಲ್ಲಾ ತಾಲ್ಲೂಕು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಯೋಗ ಮಂದಿರ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುತ್ತಿದೆ. ರೋಗಿಗಳು ಮತ್ತು ಅವರೊಂದಿಗೆ ಬರುವವರಿಗೂ ಯೋಗದ ಪರಿಚಯ ಮಾಡಿಕೊಡಲಾಗುವುದು. ಯೋಗದಲ್ಲಿ ಹೆಚ್ಚು ಜನರು ಭಾಗಿಯಾಗಬೇಕು. ಆರೋಗ್ಯ ಇಲಾಖೆಯಿಂದ ಯೋಗದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಶಾಲೆ ಮಕ್ಕಳಿಗೆ ಯೋಗ ಕಲಿಸುವ ವಿಚಾರದಲ್ಲಿ ಶಿಕ್ಷಣ ಸಚಿವರೊಂದಿಗೆ ಮಾತನಾಡಲಾಗುವುದು ಎಂದರು. ರಾಜ್ಯಪಾಲರು, ಸಭಾಪತಿ, ಸಚಿವರು, ವಿಧಾನಪರಿಷತ್ ಸದಸ್ಯ ಟಿ.ಎ.ಶರವಣ ಸೇರಿದಂತೆ ಅಧಿಕಾರಿಗಳು ಹಾಗೂ ಗಣ್ಯರು ಯೋಗಾಸನ ಮಾಡುವ ಮೂಲಕ ಗಮನಸೆಳೆದರು.

# ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ : ವೀರನಗೌಡ ಲೆಕ್ಕಿಗಾಳ

ಅನುದಾನವೂ ಅಭಿವೃದ್ಧಿ ಕೆಲಸಗಳಿಗೆ ಬಾರದಿರುವುದು ಸರಕಾರದ ಅಲಕ್ಷತನಕ್ಕೆ ಸಾಕ್ಷಿಯಾಗಿದೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ಜನಸಾಮಾನ್ಯರಿಗೆ ಬೆಲೆ ಏರಿಕೆ ಬಿಸಿ ಬದುಕು ನಡೆಸಲು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೈತಿಕ ಹೊಣೆ ಹೊತ್ತು ರಾಜಿನಾಮೆ ನೀಡಬೇಕು ಎಂದು ಪಾಟೀಲ್ ಒತ್ತಾಯಿಸಿದರು.

ಈ ಸಂಧರ್ಭದಲ್ಲಿ ಮಂಡಲ ಅಧ್ಯಕ್ಷ ಅಯ್ಯಪ್ಪ ಮಾಳೂರು, ಗಿರಿಮಲ್ಲನಗೌಡ ಪಾಟೀಲ್, ಪುರಸಭೆ ಸದಸ್ಯ ಮುದಕಪ್ಪ ನಾಯಕ, ನಾಗಭೂಷಣ, ಯಂಕನಗೌಡ ಐದನಾಳ, ಅಮರೇಶ ಸೇರಿ ಇತರರು ಇದ್ದರು.

# ಮಾನ್ವಿಯ ವಿವಿಧೆಡೆ ಯೋಗ ದಿನಾಚರಣೆ

ಕಾರ್ಯದರ್ಶಿ ಚನ್ನಬಸವ ನಾಯಕ ಬಲ್ಲಟಗಿ, ಉಪಾಧ್ಯಕ್ಷರಾದ ಮನೋಹರ ವಿಶ್ವಕರ್ಮ, ಖಜಾಂಚಿ ದತ್ತಾತ್ರೇಯ ಕೊಟ್ನೇಕಲ್, ಜಂಟಿ ಕಾರ್ಯದರ್ಶಿ ಈಶಪ್ಪ ಬೈಲ್ ಮರ್ಚೆಡ್, ಹಿರಿಯ ವಕೀಲರಾದ ಗುಮ್ಮಾ ಬಸವರಾಜ, ಎಂ.ವೀರನಗೌಡ, ಡಿ.ರವಿಕುಮಾರ,ಚಂದ್ರಶೇಖರ ರಾಥೋಡ್, ಸೇರಿದಂತೆ ನ್ಯಾಯಾಲಯದ ಸಿಬ್ಬಂದಿಗಳು, ಸೇರಿದಂತೆ ಇತರರು ಉಪಸ್ಥಿತರಿದ್ದರು.

ಪುರಸಭಾ ಸದಸ್ಯರ ಭಾಷಣದ ನಂತರ, ಶಾಲೆಯ ಎಲ್ಲಾ ಮಕ್ಕಳು, ಶಿಕ್ಷಕರು, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಅಧ್ಯಕ್ಷರು ಹಾಗೂ ಆರೋಗ್ಯ ಇಲಾಖೆಯ 'ನಮ್ಮ ಕ್ಲಿನಿಕ್' ಸಿಬ್ಬಂದಿಗಳು ಒಟ್ಟಾಗಿ ಯೋಗದ ವಿವಿಧ ಆಸನಗಳನ್ನು ಮಾಡಿದರು.

ಈ ಸಂದರ್ಭದಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಅಶ್ವಿನಿ ಅಯ್ಯಪ್ಪ, ಶಾಲಾ ಮುಖ್ಯ ಶಿಕ್ಷಕಿ ಲಕ್ಮೀದೇವಿ, ಶಿಕ್ಷಕರಾದ ವೀಣಾ ಜೋಶಿ, ಗಿರಿಜಾದೇವಿ, ಸಂಗಮೇಶ ಮುಧೋಳ, ಬಸವರಾಜ ಅಣುರ, ಆಂಜನೇಯ, ದೀಪಾ, ಲಲಿತಮ್ಮ, ನಮ್ಮ ಕ್ಲಿನಿಕ್‌ನ ಕುಮಾರಿ ಗಂಗಾ ಸೇರಿದಂತೆ ಇನ್ನಿತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಜ್ಞಾನ ಮತ್ತು ಬುದ್ಧಿವಂತಿಕೆ ಬೆಳೆಯುತ್ತದೆ. ಮಾನಸಿಕ ಮತ್ತು ಶಾಂತಿಯುತ ಅಮೂಲ್ಯ ಗುಣಗಳು ಬೆಳೆಯಲು ಸಹಕಾರಿಯಾಗುತ್ತದೆ. ಅದಕ್ಕಾಗಿ ಪ್ರತಿಯೊಬ್ಬರೂ ದಿನನಿತ್ಯ ಜೀವನದಲ್ಲಿಯೋಗಭ್ಯಾಸ ರೂಡಿಸಿಕೊಂಡು ಆರೋಗ್ಯವಾಗಿರಿ ಹೇಳಿ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಯೋಗ ಅಭ್ಯಾಸ ಹೇಳಿಕೊಟ್ಟರು.

ನಂತರ ಮಾತನಾಡಿದ ಕ್ಷೇತ್ರಶ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು ಆಶಾ ಕಾರ್ಯಕರ್ತರು ಮತ್ತು ಯುವಕರು ನಮ್ಮ ದಿನನಿತ್ಯ ಜೀವನದಲ್ಲಿ ಯೋಗ ಅಭ್ಯಾಸ ಮೂಡಿಸಿಕೊಳ್ಳಬೇಕು. ಯೋಗವು ಉತ್ತಮ ಆರೋಗ್ಯ ಮತ್ತು ಯೋಗ ಕ್ಷೇಮವನ್ನು ನೀಡುವುದರೊಂದಿಗೆ ಆರೋಗ್ಯಕರ ಜೀವನವನ್ನು ನೀಡುತ್ತದೆ. ಯೋಗದಿಂದ ನಿತ್ಯ ಜೀವನದಲ್ಲಿ ಸಮತೋಲನ ಕೌಶಲ್ಯ ಬೆಳೆಯುತ್ತದೆ ದೈಹಿಕ ನಿಸ್ಕ್ರೀಯತೆಯನ್ನು ಕಡಿಮೆ ಮಾಡಿ ಒತ್ತಡ ರಹಿತ ಜೀವನವನ್ನು ನಡೆಸಬಹುದಾಗಿದೆ. ಅದಕ್ಕಾಗಿ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ತಮ್ಮ ಆರೋಗ್ಯಕರ ಜೀವನವನ್ನು ನಡೆಸಬೇಕು ಎಂದರು.

ಈ ಸಂದರ್ಭದಲ್ಲಿ ವೆಂಕಯ್ಯ ಶೆಟ್ಟಿ ಫಾರ್ಮ್ ಸಿಸ್ಟ್ ಅಧಿಕಾರಿಗಳು ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಭೀಮೇಶಪ್ಪ . ಹನುಮನ ಗೌಡ. ಆಶಾ ಕಾರ್ಯಕರ್ತೆಯರು ಹಾಗೂ ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಅಕ್ರಮ ಗಣಿಗಾರಿಕೆ : ಸಿಎಂಗೆ ಸಚಿವ ಎಚ್.ಕೆ.ಪಾಟೀಲ್ ಪತ್ರ

ಬೊಕ್ಕಸಕ್ಕೆ ವಾಪಸ್ ತರುವಲ್ಲಿ ಪ್ರಾಮಾಣಿಕ ಹಾಗೂ ನಿಷ್ಠೆಯ ಪ್ರಯತ್ನಗಳಾಗಿಲ್ಲ ಎಂಬುದು ಜನಾಕ್ರೊಶವಾಗಿದೆ ಎಂದಿದ್ದಾರೆ.ಒಟ್ಟು ಪ್ರಕರಣಗಳಲ್ಲಿ ಶೇ. 7.6 ರಷ್ಟು ಮಾತ್ರ ತನಿಖೆಯಾಗಿವೆ. ಇನ್ನೂ 92.4 ರಷ್ಟು ಪ್ರಕರಣಗಳು ತನಿಖೆಯಾಗಬೇಕು. ತನಿಖೆಗೊಳಪಟ್ಟಿರುವ 7.6 ರಷ್ಟು ಪ್ರಕರಣಗಳಲ್ಲಿ ಶೇ. 2 ರಷ್ಟಕ್ಕೆ ತೀರ್ಪು ಬಂದು ಆರೋಪ ಸಾಬೀತಾಗಿದೆ. ಕೆಲವು ಆರೋಪಿಗಳು ಅನುಮಾನದ ತಾಂತ್ರಿಕ ಲಾಭ ಪಡೆದು ಬಿಡುಗಡೆಯಾಗಿದ್ದಾರೆ. ಅವರ ವಿರುದ್ಧ ಮೇಲನವಿ ಸಲ್ಲಿಸದೆ ನಿರ್ಲಕ್ಷಿಸಲಾಗಿದೆ. ರಾಜ್ಯಸರ್ಕಾರದ ಎಸ್‌ಐಟಿ ತನಿಖೆ ಯಾವುದೇ ಪ್ರಗತಿ ಸಾಧಿಸಿಲ್ಲ. ಸರ್ಕಾರಿ ಕಡತಗಳಲ್ಲಿ ಅಧಿಕಾರಿಗಳ ವಿಳಂಬ ದ್ರೋಹದಿಂದ ಹೂತು ಹೋಗಿದೆ ಎಂದು ಆಕ್ಷೆಪಿಸಿದ್ದಾರೆ.ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಆರ್ಡಿನೆನ್ಸ್ 1946ರ ಅಡಿ ಲೂಟಿ ಸಂಪತ್ತನ್ನು ಮರಳಿ ವಸೂಲಿ ಪಡೆಯಲು ಕ್ರಮ ಕೈಗೊಳ್ಳಬೇಕಿತ್ತು. ಈ ಪ್ರಯತ್ನಗಳು ಮುಂದುವರೆದೇ ಇಲ್ಲ. ಪಟ್ಟಭದ್ರ ಹಿತಾಸಕ್ತಿಗಳು ಅಕ್ರಮವಾಗಿ ಗಳಿಸಿದ ಸಂಪತ್ತನ್ನು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ವಿನಿಯೋಗಿಸಿ ಶಾಸಕರ ಕುದುರೆ ವ್ಯಾಪಾರ ಮಾಡಿ, ಸರ್ಕಾರವನ್ನು ಉರುಳಿಸಿ, ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಿದ್ದನ್ನು ನಾವು ನೋಡಿದ್ದೇವೆ.ಅನೈತಿಕ ಚಟುವಟಿಕೆಗಳು, ರಾಜಕಾರಣಿಗಳ ಮೋಜು ಮಸ್ತಿ ಆಡಂಬರ ಕಂಡಿದ್ದೇವೆ. 2 ದಶಕಗಳ ಕಾಲ ರಾಜ್ಯರಾಜಕಾರಣದಲ್ಲಿ ಈ ಅಕ್ರಮ ಹಣ ಬಳಕೆಯಾಗಿದೆ. ಪುಣ್ಯದ ಮೇಲೆ ಪಾಪ ವಿಜಯ ಸಾಧಿಸುತ್ತಲೇ ಬಂದಿದೆ ಎಂದಿದ್ದಾರೆ.ಆರಂಭದಲ್ಲಿ ಆಕ್ರಮ ಗಣಿಗಾರಿಕೆಯ ತನಿಖೆ ನಡೆಸಿದ್ದ ಲೋಕಾಯುಕ್ತ 2.98 ಕೋಟಿ ಟನ್ ಅಕ್ರಮ ಅದಿರು ರಫ್ತಿನಿಂದ 12,228 ಕೋಟಿ ನಷ್ಟವಾಗಿದೆ. ಕರ್ನಾಟಕದ 10, ಗೋವಾ, ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳ ವಿವಿಧ ಬಂದರುಗಳಿಂದ ರಫ್ತಾದ ಅದಿರಿಗೆ ಮಾತ್ರ ಈ ಲೆಕ್ಕ ಸೀಮಿತವಾಗಿದ್ದು, ಬಳ್ಳಾರಿಯಿಂದ ರೈಲುಗಳ ಮೂಲಕ 20 ಕೋಟಿ ಟನ್‌ನಷ್ಟು ಅಕ್ರಮ ಅದಿರು ರಫ್ತಾಗಿದೆ.2009ರಿಂದ ಜೂನ್ 10 ರ ನಡುವೆ 14 ಕೋಟಿಯಷ್ಟು ಕಬ್ಬಿಣದ ಅದಿರನ್ನು 20 ಸಾವಿರ ಟ್ರಕ್‌ಗಳ ಮೂಲಕ ಸಾಗಿಸಲಾಗಿದೆ. ಲೋಕಾಯುಕ್ತರು ಮಾಡಿದ 3 ಕೋಟಿ ಟನ್‌ನ ಅಕ್ರಮ ಗಣಿ ಸಾಗಾಣಿಕೆ ಹಾಗೂ ರೈಲ್ವೆ ಇಲಾಖೆ ಮೂಲಕ ಸಾಗಾಣಿಕೆಯಾಗಿರುವ 35 ಕೋಟಿ ಟನ್ ಅದಿರಿನ ಅಂಕಿ ಅಂಶಗಳ ನಡುವೆ ಅಜಗಜಾಂತರ ವ್ಯತ್ಯಾಸಗಳಿವೆ. 3 ಕೋಟಿ ಟನ್‌ಗೆ 12 ಸಾವಿರದಷ್ಟು ನಷ್ಟವಾಗುವುದಾದರೆ 35 ಕೋಟಿ ಟನ್‌ಗೆ 1.50 ಲಕ್ಷ ಕೋಟಿ ನಷ್ಟವಾಗಿದೆ ಎಂದು ವಿವರಿಸಿದ್ದಾರೆ.ವಾಣಿಜ್ಯ ತೆರಿಗೆ, ಅಬಕಾರಿ, ಅರಣ್ಯ ಅಭಿವೃದ್ಧಿ ಸುಂಕಗಳ ವಂಚನೆ 16 ವರ್ಷವಾದರೂ ಶಿಥಿಲಾವಸ್ಥೆಯಲ್ಲಿವೆ. ಕೆಲವೇ ಕೆಲವು ಪ್ರಕರಣಗಳು ನಿರ್ಣಾಯಕ ಹಂತಕ್ಕೆ ಬಂದಿವೆ. 43 ಕ್ಕೂ ಹೆಚ್ಚು ಎಫ್‌ಐಆರ್‌ಗಳು ನ್ಯಾಯಾಲಯದ ವಿವಿಧ ಹಂತದ ವಿಚಾರಣೆಯಲ್ಲಿವೆ ಎಂದಿದ್ದಾರೆ. 2013 ರ ನವೆಂಬರ್ 18 ರಂದು 9 ಪ್ರಕರಣಗಳನ್ನು ಸಿಬಿಐಗೆ ನೀಡಲಾಗಿತ್ತು. 3 ರಲ್ಲಿ ಮಾತ್ರ ತನಿಖೆ ನಡೆಸಿದ ಸಿಬಿಐ 6 ಪ್ರಕರಣಗಳ ತನಿಖೆಯನ್ನು ನಿರಾಕರಿಸಿತ್ತು. ಅವುಗಳನ್ನು ಲೋಕಾಯುಕ್ತದ ವಿಶೇಷ ತನಿಖಾ ದಳಕ್ಕೆ ರಾಜ್ಯಸರ್ಕಾರ ವಹಿಸಿದೆ ಎಂದು ಎಚ್.ಕೆ.ಪಾಟೀಲ್ ವಿವರಿಸಿದ್ದಾರೆ.

# ರಾಯಚೂರು ಜಿಲ್ಲೆಯಲ್ಲಿ 11 ಆಶಾ ಕಿರಣ ದೃಷ್ಠಿ ಕೇಂದ್ರ ಸ್ಥಾಪನೆ: ಸಿಇಒ ಪಾಂಡ್ವೆ ರಾಹುಲ್

**ರಾಯಚೂರು,ಜೂ.21–**ರಾಯಚೂರು ಜಿಲ್ಲೆಯಲ್ಲಿ 11 ಆಶಾ ಕಿರಣ ದಷ್ಠಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಅಂದತ್ವ ಸಮಸ್ಯೆಯಿಂದ ಬಳಲುತ್ತಿರುವವುರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ತುಕಾರಾಮ್ ಪಾಂಡ್ವೆ ರವರು ತಿಳಿಸಿದ್ದಾರೆ.

ಮುಖ್ಯಮಂತ್ರಿಗಳು ಹಾಗೂ ಆರೋಗ್ಯ ಸಚಿವರ ಆಶಾ ಕಿರಣ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಆಶಾ ಕಿರಣ ಕೇಂದ್ರಗಳನ್ನು ಸ್ಥಾಪಿಸಲಾಗಿರುವ ಪೈಕಿ ರಾಯಚೂರು ಜಿಲ್ಲೆಗೆ 11 ಆಶಾ ಕಿರಣ ದೃಷ್ಠಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, 1,ರಿಮ್ಸ್ ಭೋಧಕ ಆಸ್ಪತ್ರೆ, 4,ತಾಲೂಕ ಸಾರ್ವಜನಿಕ ಆಸ್ಪತ್ರೆ ಹಾಗೂ ಸಮುದಾಯ ಆರೋಗ್ಯ ಕೇಂದಗಳಲ್ಲಿ 6 ಕಡೆ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಈ ಕೇಂದ್ರಗಳಲ್ಲಿ ಜಿಲ್ಲೆಯಲ್ಲಿರುವ ಖಾಯಂ ನೇತ್ರಾಧಿಕಾರಿಗಳನ್ನು ಶಾಶತ್ವ ನಿಯೋಜನೆ ಮಾಡಿ, ಕೇಂದ್ರಗಳಿಗೆ ಸ್ಥಳೀಯ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಂದ ಪ್ರಾಥಮಿಕ ಆರೋಗ್ಯ ಸುರಕ್ಷ ಅಧಿಕಾರಿಗಳು ಮತ್ತು ಆರೋಗ್ಯ ನಿರೀಕ್ಷಣಾಧಿಕಾರಿಗಳು ಮತ್ತು ಆಶಾ ಕಾರ್ಯಕರ್ತರು ಮನೆ ಮನೆ ಭೇಟಿ ನೀಡಿ ದೃಷ್ಠಿ ದೋಷ ಹೊಂದಿದವರನ್ನು ತಪಾಸಣೆಗೆ ಕಳುಹಿಸುವ ವ್ಯವಸ್ಥೆ ಮಾಡಿದ್ದಾರೆ.

ತಪಾಸಣೆ ಸಮಯದಲ್ಲಿ ದೃಷ್ಠಿ ದೋಷ ಕಂಡುಬಂದ ವಯೋ ವೃದ್ದರಿಗೆ 634 ಕನ್ನಡಕಗಳನ್ನು ವಿತರಣೆ ಮಾಡಲಾಗಿರುತ್ತದೆ, ಕಣ್ಣಿನ ಪೊರೆ ಕಂಡುಬಂದವರಿಗೆ ಉಚಿತ ಶಸ್ತ್ರ ಚಿಕಿತ್ಸೆ ಮಾಡಲಾಗುತ್ತದೆ. ರಾಷ್ಟ್ರೀಯ ಅಂದತ್ವ ನಿಯಂತ್ರಣಾ ಕಾರ್ಯಕ್ರಮದಡಿಯಲ್ಲಿ ಜಿಲ್ಲಾ ಅಂದತ್ವ ಪ್ರಗತಿಯ ಪರಿಶೀಲನೆಯಲ್ಲಿ ಜಿಲ್ಲೆಯ ಒಟ್ಟು 6920 ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆಯ ಗುರಿ ಇರುತ್ತದೆ. ಅದರನ್ವಯ ಸರ್ಕಾರಿ ಆಸ್ಪತ್ರೆ ಮತ್ತು ಖಾಸಗಿ ಸಂಸ್ಥೆಗಳು ಹಾಗೂ ಒಡಬಂಡಿಕೆ ಹೊಂದಿರುವ ಎನ್.ಜಿ.ಓ ಕಣ್ಣಿನ ಆಸ್ಪತ್ರೆಗಳು ಮತ್ತು ನಗರದ ಖಾಸಗಿ ಆಸ್ಪತ್ರೆಗಳು ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ.

ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸೆ ಹೊಂದಿದ ವಿವರ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರ ಬಾಬು ರವರು ಮಾತನಾಡಿ, ರಿಮ್ಸ್ ಆಸ್ಪತ್ರೆ ರಾಯಚೂರಿನಲ್ಲಿ ಒಟ್ಟು 1567, ತಾಲೂಕ ಆಸ್ಪತ್ರೆ ಮಾನ್ವಿ 688 ಮತ್ತು ಸಿಂಧನೂರುನಲ್ಲಿ 433, 2024–25 ಸಾಲಿನಲ್ಲಿ ಒಡಂಬಡಿಕೆಯಾದ ಎನ್‌ಜಿಓ ಸಂಸ್ಥೆಗಳಾದ ಶಂಕರ್ ಐ ಆಸ್ಪತ್ರೆ ಶಿವಮೊಗ್ಗ ಇವರು ಸಿಂಧನೂರು ಮತ್ತು ಲಿಂಗಸೂಗುರುನಲ್ಲಿ ಒಟ್ಟು 1082 , ಜನಹಿತ ಐ ಕೇರ್ ದೇವದುರ್ಗ ಮತ್ತು ಮಾನ್ವಿಯಲ್ಲಿ ಒಟ್ಟು 1521, ಶ್ರೀ ವಿವೇಕನಂದ ಸೇವಾ ಆಶ್ರಮ ಬೆಂಗಳೂರು ಇವರು 1411, ನಗರದ ಖಾಸಗಿ ಆಸ್ಪತ್ರೆಗಳು, ನವೋದಯ ಮೆಡಿಕಲ್ ಕಾಲೇಜ್, ಎಂ.ಕೆ.ಬಿ. ಭಂಡಾರಿ, ದೃಷ್ಠಿ ಐ ಕೇರ್ ಆಸ್ಪತ್ರೆ ಎಂ.ಎಂ.ಜ್ಯೋಷಿ ಇವರು 264 ಕಣ್ಣಿನ ಪೊರೆಗಳ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ರಾಯಚೂರು ಜಿಲ್ಲೆಯಲ್ಲಿ ಒಟ್ಟು 6966 ಉಚಿತ ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆ ಮಾಡಿಸಲಾಗಿದೆ.

ಆರೋಗ್ಯ ಕೇಂದ್ರದ ತಪಾಸಣೆ ವೇಳೆ 9 ಮಕ್ಕಳಲ್ಲಿ ಕಣ್ಣಿನ ಪೊರೆ ಕಂಡುಬಂದಿದ್ದು ಅದರಲ್ಲಿ ಒಟ್ಟು 8 ಮಕ್ಕಳಿಗೆ ಶಂಕರ ಐ ಆಸ್ಪತ್ರೆ ಶಿವಮೊಗ್ಗ ಇವರು ಶಿವಮೊಗ್ಗ ಅವರ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಶಸ್ತ್ರ ಚಿಕಿತ್ಸೆ ಯಶಸ್ವಿಯಾಗಿ ಮಾಡಿಸಿ ಕಳುಹಿಸಿದ್ದಾರೆ.

ರಾಯಚೂರು ಜಿಲ್ಲೆಯಲ್ಲಿ ಆಶಾ ಕಿರಣ ಕಾರ್ಯಕ್ರಮದ ಅಡಿಯಲ್ಲಿ ಶಾಲಾ ಮಕ್ಕಳ ದೃಷ್ಠಿ ದೋಷ ತಪಾಸಣೆಗಾಗಿ ಒಟ್ಟು 13,500 ಗುರಿ ಇದೆ. ಅದರನ್ವಯ ಜಿಲ್ಲೆಯಲ್ಲಿ ಒಟ್ಟು ಸರಕಾರಿ ಶಾಲಾ ಮಕ್ಕಳು 2,61,889 ಮತ್ತು ಅರೇ ಸರಕಾರಿ 23,644 ಇದ್ದು, ಶಾಲಾ ಮಕ್ಕಳಿಗೆ ಆರೋಗ್ಯ ಕೇಂದ್ರದಲ್ಲಿರುವ 12 ನೇತ್ರಾಧಿಕಾರಿಗಳ ಮುಖಾಂತರ ಮತ್ತು ಆರ್.ಬಿ.ಎಸ್.ಕೆ ಯೋಜನೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 12 ನೇತ್ರಾಧಿಕಾರಿಗಳ ಮುಖಾಂತರ ಶಾಲಾ ಮಕ್ಕಳಿಗೆ ನೇತ್ರಾ ಪರೀಕ್ಷೆ ಮಾಡಿದಾಗ ಅದರಲ್ಲಿ ಒಟ್ಟು 6981 ದೃಷ್ಠಿ ದೋಷ ಹೊಂದಿರುವ ಮಕ್ಕಳು ಕಂಡುಬಂದಿರುತ್ತಾರೆ. ದೃಷ್ಠಿ ದೋಷ ಕಂಡುಬಂದ ಮಕ್ಕಳಿಗೆ ಆಶಾ ಕಿರಣ ಅಪ್ಲಿಕೇಷನ್ ಮೂಲಕ 4276 ಕನ್ನಡಕ ವಿತರಣೆ ಮಾಡಲಾಗಿರುತ್ತದೆ.

ಇನ್ನುಳಿದ ಕನ್ನಡಕಗಳು 2025–26ನೇ ಸಾಲಿನಲ್ಲಿ ಶಾಲೆ ಪ್ರಾರಂಭವಾದ ಮಕ್ಕಳಿಗೆ ವಿತರಣೆ ಮಾಡಲಾಗುತ್ತದೆ.

2024–25ನೇ ಸಾಲಿನಲ್ಲಿ ಆಶಾ ಕಿರಣ ಯೋಜನೆಯನ್ನು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಿದ್ದು. ಅದರಂತೆ ಎಲ್ಲಾ ಆಶಾ ಕಾರ್ಯಕರ್ತರು ಮನೆ ಮನೆ ಭೇಟಿ ನೀಡಿ, ದೃಷ್ಠಿ ತಪಾಸಣೆ ಕೈಗೊಂಡಿರುತ್ತಾರೆ,

ಇದರಲ್ಲಿ ದೃಷ್ಠಿ ದೋಷ ಕಂಡುಬಂದಿರುವ ಪಲಾನುಭವಿಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಟ್ಟದಲ್ಲಿ ನೇತ್ರಾಧಿಕಾರಿಗಳಿಂದ ಪುನಃ ತಪಾಸಣೆ ಮಾಡಿ 71 ಸಾವಿರ ದೃಷ್ಠಿ ದೋಷ ಉಳ್ಳವರನ್ನು ಪತ್ತೆ ಹಚ್ಚಲಾಗಿದೆ. ಇದರಲ್ಲಿ ಆರು ಸಾವಿರ ಶಾಲಾ ಮಕ್ಕಳು ಮತ್ತು ವಯೋವೃದ್ಧರು ಇರುತ್ತಾರೆ. ಇವರೆಲ್ಲರಿಗೆ ಕನ್ನಡಕಗಳು ನೇತ್ರಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು, ಸಮುದಾಯ ಆರೋಗ್ಯ ಅಧಿ ಕಾರಿಗಳು ಮತ್ತು ಆಶಾ ಕಾರ್ಯಕರ್ತರ ಮೂಲಕ ಇದುವರೆಗೆ 40,000 ಜನರಿಗೆ ಹಂಚಲಾಗಿರುತ್ತದೆ, ಇನ್ನುಳಿದವರಿಗೆ ಕೂಡ ಹಂಚಿಕೆಯು ಪ್ರಗತಿಯಲ್ಲಿರುತ್ತದೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ತಿಳಿಸಿರುತ್ತಾರೆ

# ನಮ್ಮ ಕ್ಲಿನಿಕ್‌ಗಳಿಗೆ ಬೀಳುತ್ತಾ ಬೀಗ..?

**ಬೆಂಗಳೂರು, ಜೂ.21–** ಬಡವರ ಚಿಕಿತ್ಸೆಗೆ ನೆರವಾಗಲಿ ಎಂದು ಬಿಬಿಎಂಪಿ ವ್ಯಾಪ್ತಿಯಲ್ಲಿ ತೆರೆಯಲಾಗಿರುವ ನಮ ಕ್ಲಿನಿಕ್‌ಗಳಿಗೆ ಬೀಗ ಜಡಿಯುವ ಪರಿಸ್ಥಿತಿ ಬಂದೋದಗಿದೆ. ನಮ ಕ್ಲಿನಿಕ್‌ಗಳನ್ನು ಆರಂಭಿಸಿದ ದಿನದಿಂದಲೂ ಒಂದಿಲ್ಲ ಒಂದು ಸಮಸ್ಯೆ ಎದುರಾಗುತ್ತಲೆ ಇದೆ. ಅಂತಹ ಕ್ಲಿನಿಕ್‌ಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ಕಳೆದ ಮೂರು ತಿಂಗಳಿನಿಂದ ಸಂಬಳ ಸಿಗುತ್ತಿಲ್ಲ. ಸರ್ಕಾರದ ಈ ಧೋರಣೆಯಿಂದ ಬೇಸತ್ತಿರುವ ಸಿಬ್ಬಂದಿಗಳು ಮುಂದಿನ ತಿಂಗಳು ಬಾಕಿ ಇರುವ ಸಂಬಳ ಪಾವತಿಸದಿದ್ದರೆ ಕ್ಲಿನಿಕ್‌ಗಳನ್ನು ತೆರೆಯುವುದಿಲ್ಲ ಎಂದು ಪಟ್ಟು ಹಿಡಿದಿದ್ದಾರೆ.

ನಗರದಲ್ಲಿ ಒಟ್ಟು 140 ಕ್ಕೂ ಹೆಚ್ಚು ನಮ್ಮ ಕ್ಲಿನಿಕ್‌ಗಳು ಇವೆ. ಇಲ್ಲಿ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಸಿಬ್ಬಂದಿಗಳು ಕೆಲಸ ಮಾಡುತ್ತಿದ್ದಾರೆ.ಬಡವರಿಗೆ, ಕೂಲಿ ಕಾರ್ಮಿಕರಿಗೆ ಉಚಿತ ಚಿಕಿತ್ಸೆಸಿಗಲಿ ಎಂಬ ಉದ್ದೇಶದಿಂದ ಓಪನ್ ಅಗಿದ ನಮ್ಮ ಕ್ಲಿನಿಕ್‌ಗಳಿಗೆ ಇದೀಗ ಬೀಗ ಜಡಿಯುವ ಪರಿಸ್ಥಿತಿ ಬಂದಿದೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾರಿಗೆ ತರಲಾದ ನಮ ಕ್ಲಿನಿಕ್ ಕಾನ್ಸೆಪ್‌ಗೆ ಹಾಲಿ ಕಾಂಗ್ರೆಸ್ ಸಹಕಾರ ನೀಡುತ್ತಿಲ್ಲ ಎಂಬ ಆರೋಪಗಳು ಕೇಳಿ ಬರುತ್ತಿವೆ. ಈ ಹಿಂದೆ ಕಾಂಗ್ರೆಸ್ ಜಾರಿಗೆ




ತಂದಿದ್ದ ಇಂದಿರಾ ಕ್ಯಾಂಟಿನ್‌ಗಳ ಬಗ್ಗೆ ಅಂದಿನ ಬಿಜೆಪಿ ಸರ್ಕಾರ ಉದಾಸೀನ ತೋರಿತ್ತು. ಈಗ ಇರುವ ಕಾಂಗ್ರೆಸ್? ಸರ್ಕಾರವೂ ಅದೇ ಧೋರಣೆಯನ್ನು ಮುಂದುವರೆಸುತ್ತಿದೆ ಎಂಬ ಮಾತುಗಳು ಕೇಳಿಬರುತ್ತಿವೆ.

ಗ್ಯಾರಂಟಿ ಯೋಜನೆಗಳಿಂದ ಕಾಂಗ್ರೆಸ್ ಸರ್ಕಾರ ನಮಗೆ ಸಂಬಳ ನೀಡಲು ಮೀನಾಮೇಷ ಎಣಿಸುತ್ತಿದೆ. ಇದೇ ಧೋರಣೆ ಮುಂದುವರೆದರೆ ನಾವು ಮುಂದಿನ ತಿಂಗಳಿನಿಂದ ಕ್ಲಿನಿಕ್ ತೆರೆಯಲ್ಲ ಎನ್ನುತ್ತಿದ್ದಾರೆ ಅಲ್ಲಿನ ಸಿಬ್ಬಂದಿಗಳು.

# ಬಳ್ಳಾರಿಯಲ್ಲಿ ಆಡಳಿತ ಸಂಪೂರ್ಣಫೇಲ್ಯೂರ್ : ತಾಯಣ್ಣ

**ಬಳ್ಳಾರಿ, ಜೂ.21–** ಬೆಟ್ಟಿಂಗ್, ಮಟ್ಕಾ, ಇಸ್ಪೀಟ್ ಗ್ಯಾಂಬ್ಲಿಂಗ್ ನಗರದಲ್ಲಿ ಹೆಚ್ಚಾಗಿ ನಡೆಯುತ್ತಿದೆ. ಪೊಲೀಸ ವ್ಯವಸ್ಥೆ ಸೇರಿ ಜಿಲ್ಲಾ ಆಡಳಿತ ವ್ಯವಸ್ಥೆ ಕಂಪ್ಲೀಟ್ ಫೇಲ್ಯೂರ್ ಆಗಿದೆಂದು ಜೆಡಿಎಸ್ ಜಿಲ್ಲಾ ಅಧ್ಯಕ್ಷ ಮೀನಳ್ಳಿ ತಾಯಣ್ಣ ಆರೋಪಿಸಿದ್ದಾರೆ.

ಅವರಿಂದ ತಮ್ಮ ಪಕ್ಷದ ಜಿಲ್ಲಾ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ. ಎಲ್ಲಿ ಏನೇ ಅಕ್ರಮ ಚಟುವಟಿಕೆಗಳು ನಡೆದರೂ ಪೊಲೀಸ್ ವ್ಯವಸ್ಥ ಕಣ್ಣು ಮುಚ್ಚಿಕೂತಿದೆ ಯಾಕೆಂದು ಗೊತ್ತಿಲ್ಲ. ಜನಪ್ರತಿನಿಧಿಗಳೇ ಈ ರೀತಿ ಮಾಡಿಸಿದ್ದಾರಾ ಎಂಬ ಪ್ರಶ್ನೆ ಕಾಡುತ್ತಿದೆ. ಇಲ್ಲಿನ ಮಹಾನಗರ ಪಾಲಿಕೆಯಲ್ಲಿಯಂತೂ ಬಡವರು ಲಂಚ ನೀಡದೇ ಇದ್ದರೆ ಕೆಲಸ ಆಗಲ್ಲ. ಯಾವ ಕೆಲಸ ಆಗಬೇಕೆಂದರೂ ದುಡ್ಡು ಕೊಡಬೇಕು. ಎರಡು ತಿಂಗಳಿಂದ ಬಿ. ಖಾತೆ ಮಾಡಲಾಗುತ್ತಿದೆ. ಲಂಚ ಭ್ರಷ್ಟಾಚಾರ ತಾಂಡವ. ಆಡುತ್ತಿದೆ.

ಕಳೆದ 10–15 ವರ್ಷಗಳಿಂದ ಬಳ್ಳಾರಿಯಲ್ಲೇ ಠಿಕಾಣಿ ಹೂಡಿದ್ದಾರೆ. ವಿಮ್ಸ್ ನಿರ್ದೇಶಕ ಗಂಗಾಧರ ಗೌಡ, ಜಿಲ್ಲಾ ಆಸ್ಪತ್ರೆಯ ಅಧಿಕಾರಿ ಡಾ.ಎನ್ವ. ಬಸಾರೆಡ್ಡಿ ಸೇರಿ ಅನೇಕರು, ನಮಗೆ ನಿಷ್ಠಾವಂತ, ಜನಪರವಾದ ಅಧಿಕಾರಿಗಳನ್ನು ಹಾಕಬೇಕು.

ಲೋಕಾಯುಕ್ತ ಅಧಿಕಾರಿಗಳು ಈ ಹಿಂದೆ ಜಿಲ್ಲಾ ಆಸ್ಪತ್ರೆಗೆ




ದಾಳಿ ಮಾಡಿದ್ದರು. ಆದರೂ ಏನೂ ಆಗಿಲ್ಲ. ಬಾಣಮನತಿಯರ ಸಾವಾಯ್ತು, ಏನೂ ಆಗಲಿಲ್ಲ. ಬಸಾರೆಡ್ಡಿ ಮಾತ್ರ ಚೆನ್ನಾಗಿದ್ದಾರೆಂದರು.

ನಗರದಲ್ಲಿ ಸಂಚಾರಿ ಸಮಸ್ಯೆಯೂ ಹದಗೆಟ್ಟಿದೆ. ಭಾರಿ ವಾಹನಗಳು ದಿನದ 24 ತಾಸು ನಗರದಲ್ಲಿ ಸಂಚಾರಿಸುತ್ತಿವೆ. ಮೀನಾಕ್ಷಿ ವೃತ್ತದಿಂದ ಸಂಗಮ್ ವೃತ್ತಕ್ಕೆ ಬರಬೇಕೆಂದರೆ 10–15 ನಿಮಿಷ ಬೇಕಾಗುತ್ತಿದೆ.

ಒಟ್ಟಾರೆ ಜಿಲ್ಲೆಯಲ್ಲಿ ಆಡಳಿತ ಇದೆಯಾ ಎಂಬಂತಿದೆಂದರು. ಲಕ್ಷ್ಮೀಕಾಂತರೆಡ್ಡಿ ಮೊದಲಾದವರು ಸುದ್ದಿಗೋಷ್ಠಿಯಲ್ಲಿ ಇದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111, 9743496111

# ವಿಶಾಖಪಟ್ಟಣಂನಲ್ಲಿ ಪ್ರಧಾನಿ ಮೋದಿ ಯೋಗಾಭ್ಯಾಸ

## ಜಗತ್ತಿನೊಂದಿಗೆ ಏಕತೆ ಸಾಧಿಸಲು ಯೋಗ ಸಹಾಯ: ಮೋದಿ

**ವಿಶಾಖಪಟ್ಟನ,ಜೂ.21–** ಐಎನ್‌ಸ್ ಚೋಳದಿಂದ ಆರ್‌ಕೆ ಬೀಚ್ಗೆ ಆಗಮಿಸಿದ ಮೋದಿ ಅವರಿಗೆ ಸಿಎಂ ಚಂದ್ರಬಾಬು ನಾಯ್ಡು, ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಮತ್ತು ಸಚಿವರು ಭವ್ಯಸ್ವಾಗತ ಕೋರಿದರು. ದೇಶಾದ್ಯಂತ 11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸುತ್ತಿದ್ದೇವೆ. ಯೋಗದ ಮಹತ್ವವನ್ನು ವಿಶ್ವಕ್ಕೆ ಪರಿಚಯಿಸಿದ ಖ್ಯಾತಿ ಪ್ರಧಾನಿ ಮೋದಿಗೆ ಸಲ್ಲುತ್ತದೆ ಎಂದು ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಹೇಳಿದರು.

ಆರ್‌ಕೆ ಬೀಚ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಜೊತೆಗೆ ಲಕ್ಷಾಂತರ ಮಂದಿ ಯೋಗ ಮಾಡಿದರುಪವನ್ ಕಲ್ಯಾಣ್ ಈಗ ಸಿನಿಮಾ ರಂಗದಲ್ಲಿ ಹಾಗು ರಾಜಕೀಯ ಜೊತೆ ಜೊತೆ ಯಾಗಿ ಮಾಡುತ್ತಿದ್ದಾರೆ.ಪವನ್ ಕಲ್ಯಾಣ್ ಬಳಿ ಈಗ ಮೂರು ಚಿತ್ರಗಳಲ್ಲಿ ನಟಿಸುತ್ತಿದ್ದು ರಾಜ್ಯದಲ್ಲಿ ಹೊಸ ಅಲೆ ಮೂಡಿಸಿದ್ದಾರೆ. ವಿಶ್ವಸಂಸ್ಥೆಯಲ್ಲಿ ಯೋಗದ ಮಹತ್ವದ ಬಗ್ಗೆ ಮನವರಿಕೆ ಮಾಡಿದ ಪ್ರಧಾನಿ ಅವರು ಆರೋಗ್ಯವಂತ ಸಮಾಜಕ್ಕೆ ಒಳಿತು ಮೂಡಿಸಿದರು.ಇದರಿಂದಾಗಿ ಇಂದು ವಿಶ್ವ ಯೋಗ ದಿನವನ್ನಾಗಿ ಆಚರಿಸಲು ಸಾಧ್ಯವಾಗಿದೆ ಎಂದು ಪವನ್ ಕಲ್ಯಾಣ್ ಅವರು ಹೇಳಿದರು.

ಯೋಗವು ಜನರನ್ನು ಜಗತ್ತಿನೊಂದಿಗೆ ಏಕತೆಯತ್ತ ಕೊಂಡೊಯ್ಯುತ್ತದೆ, ಆದರೆ ಅಂತರರಾಷ್ಟ್ರೀಯ ಯೋಗ ದಿನವು ಮಾನವಕುಲದ ಪ್ರಾಚೀನ ಅಭ್ಯಾಸದ ಆರಂಭವನ್ನು ಸೂಚಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಇಲ್ಲಿ 11 ನೇ ಅಂತರರಾಷ್ಟ್ರೀಯ ಯೋಗ ದಿನದಂದು ಭಾಗವಹಿಸಿದವರನ್ನು ಉದ್ದೇಶಿಸಿ ಮಾತನಾಡಿದ ಮೋದಿ, ಭಾರತ ಜೂನ್ 21 ಅನ್ನು ವಿಶ್ವಸಂಸ್ಥೆಯಲ್ಲಿ ಅಂತರರಾಷ್ಟ್ರೀಯ ಯೋಗ ದಿನವನ್ನಾಗಿ ಆಚರಿಸಲು ಪ್ರಸ್ತಾಪಿಸಿದಾಗ, ಅಲ್ಪಾವಧಿಯಲ್ಲಿಯೇ 175 ದೇಶಗಳು ಅದನ್ನು ಒಪ್ಪಿಕೊಂಡಿವೆ ಎಂದು ಹೇಳಿದರು.

11 ವರ್ಷಗಳ ನಂತರ, ಯೋಗವು ಈಗ ಪ್ರಪಂಚದಾದ್ಯಂತದ ಕೋಟ್ಯಂತರ ಜನರ ಜೀವನದ ಭಾಗವಾಗಿದೆ ಎಂದು ಅವರು ಹೇಳಿದರು. ಸಿಡ್ನಿ ಒಪೇರಾ ಹೌಸ್ ಆಗಿರಲಿ ಅಥವಾ ಎವರೆಸ್ಟ್ ಪರ್ವತವಾಗಲಿ ಅಥವಾ ಸಾಗರದ ವ್ಯಾಪ್ತಿಯಾಗಿರಲಿ, ಯೋಗವು ಎಲ್ಲರಿಗೂ ಎಂಬ ಸಂದೇಶವಾಗಿದೆ.ಪ್ರಪಂಚದಾದ್ಯಂತ ಕೆಲವು ಉದ್ವಿಗ್ನತೆಗಳು ಅಥವಾ ಇತರವುಗಳು ನಡೆಯುತ್ತಿವೆ ಎಂದು ಪ್ರಧಾನಿ ಹೇಳಿದರು. ಜಗತ್ತಿಗೆ ನನ್ನ ವಿನಂತಿ ಏನೆಂದರೆ ಈ ಯೋಗ ದಿನವು ಮಾನವೀಯತೆಗಾಗಿ ಯೋಗ 2.0 ರ ಆರಂಭವನ್ನು ಗುರುತಿಸಲಿ, ಅಲ್ಲಿ ಆಂತರಿಕ ಶಾಂತಿ ಜಾಗತಿಕ ನೀತಿಯಾಗುತ್ತದೆ ಎಂದು ಅವರು ಹೇಳಿದರು.ಯೋಗವು ಪ್ರಪಂಚದೊಂದಿಗೆ ಏಕತೆಯತ್ತ ಪ್ರಯಾಣವನ್ನು ಮುನ್ನಡೆಸುತ್ತದೆ ಎಂದು ಅವರು ಹೇಳಿದರು.ಇದಲ್ಲದೆ, ಯೋಗವು ಗಡಿಗಳು, ಹಿನ್ನೆಲೆಗಳು, ವಯಸ್ಸು



ಅಥವಾ ಸಾಮರ್ಥ್ಯಗಳನ್ನು ಮೀರಿ ಎಲ್ಲರಿಗೂ ಸೂಕ್ತವಾಗಿದೆ ಎಂದು ಪ್ರಧಾನಿ ಹೇಳಿದರು. ಯೋಗವು ಒಂದು ಉತ್ತಮ ವೈಯಕ್ತಿಕ ಶಿಸ್ತು, ಜನರನ್ನು ನಾನು, ನಾವು ಎಂಬುದಕ್ಕೆ ಕರೆದೊಯ್ಯುವ ವ್ಯವಸ್ಥೆ ಮತ್ತು ಮಾನವೀಯತೆಯು ಉಸಿರಾಡಲು, ಮತ್ತೆ ಸಂಪೂರ್ಣವಾಗಲು ಸಮತೋಲನ ಸಾಧಿಸಲು ಅಗತ್ಯವಿರುವ ವಿರಾಮ ಗುಂಡಿಯಾಗಿದೆ ಎಂದು ಅವರು ಹೇಳಿದರು. ನಂತರ ಪ್ರಧಾನಿ ಯೋಗ ಮಾಡಲು ಸ್ವಯಂಸೇವಕರೊಂದಿಗೆ ಸೇರಿಕೊಂಡರು.

ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಕೂಡ ಕಾರ್ಯಕ್ರಮದಲ್ಲಿ ಮಾತನಾಡಿದರು. ಮೋದಿ ಅವರು ಭಾರತದಲ್ಲಿ ಮಾತ್ರವಲ್ಲದೆ ಪ್ರಪಂಚದಾದ್ಯಂತ ಯೋಗವನ್ನು ಜನಪ್ರಿಯಗೊಳಿಸಿದರು, ಅದನ್ನು ಜಾಗತಿಕ ಸ್ವಾಸ್ಥ್ಯ ಚಳುವಳಿಯಾಗಿ ಪರಿವರ್ತಿಸಿದರು ಎಂದು ನಾಯ್ಡು ಹೇಳಿದರು.

ಯೋಗ ದಿನವನ್ನು 175 ಕ್ಕೂ ಹೆಚ್ಚು ದೇಶಗಳಲ್ಲಿ, 12 ಲಕ್ಷ ಸ್ಥಳಗಳಲ್ಲಿ 10 ಕೋಟಿಗೂ ಹೆಚ್ಚು ಜನರ ಭಾಗವಹಿಸುವಿಕೆಯೊಂದಿಗೆ ಆಚರಿಸಲಾಗುತ್ತಿದೆ ಎಂದು ನಾಯ್ಡು ಎತ್ತಿ ತೋರಿಸಿದರು.ಯೋಗವನ್ನು ಭಾರತದಲ್ಲಿ ಮಾತ್ರವಲ್ಲದೆ (ಆದರೆ) ಅಕ್ರೋಸ್‌ನಲ್ಲಿ ಜನಪ್ರಿಯಗೊಳಿಸಿದ್ದಕ್ಕಾಗಿ ನಮ್ಮ ದೂರದೃಷ್ಟಿಯ ಪ್ರಧಾನಿ ನರೇಂದ್ರ ಮೋದಿಯವರಿಗೆ ನಾನು ಧನ್ಯವಾದ ಹೇಳುತ್ತೇನೆ ಎಂದು ಅವರು ಹೇಳಿದರು.

# ಯೋಗಾಭ್ಯಾಸ ಮಾಡಲು ದೇವೇಗೌಡರ ಕರೆ



**ಬೆಂಗಳೂರು, ಜೂ.21–**ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಶುಭಾಶಯಗಳನ್ನು ಕೋರಿರುವ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು, ಆರೋಗ್ಯಕ್ಕಾಗಿ ಎಲ್ಲರೂ ಯೋಗಾಭ್ಯಾಸ ಮಾಡಬೇಕು ಎಂದು ಕರೆ ನೀಡಿದ್ದಾರೆ.

ಈ ಸಂಬಂಧ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಇಷ್ಟು ದಿನ ನನ್ನನ್ನು ಮುನ್ನಡೆಸಿದ್ದು, ಯೋಗ. ಯೋಗವು ನನ್ನ ಮನಸ್ಸು ಮತ್ತು ದೇಹ ಎರಡಕ್ಕೂ ನೆರವಾಗಿದೆ ಎಂದಿದ್ದಾರೆ. ಎಲ್ಲರಿಗೂ ತುಂಬಾ ತೃಪ್ತಿಕರ ಮತ್ತು ಆರೋಗ್ಯಕರ ಅಂತರರಾಷ್ಟ್ರಿ ಯ ಯೋಗ ದಿನಾಚರಣೆಯ ಶುಭಾಶಯಗಳನ್ನು ಕೋರುವುದಾಗಿ ಅವರು ಹೇಳಿದ್ದಾರೆ.

# ಭಾರತೀಯ ರಕ್ಷಣಾ ಪಡೆಗಳಿಂದ ಯೋಗಾ ದಿನಾಚರಣೆ

**ನವದೆಹಲಿ, ಜೂ. 21–** ಸಿಯಾಚಿನ್ ಹಿಮನದಿಯಿಂದ ಹಿಡಿದು ವಿಶಾಖಪಟ್ಟಣದಲ್ಲಿ ಲಂಗರು ಹಾಕಿರುವ ನೌಕಾ ಹಡಗುಗಳವರೆಗೆ, ಭಾರತೀಯ ಸಶಸ್ತ್ರ ಪಡೆಗಳು ಇಂದು ದೇಶಾದ್ಯಂತ ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಿದವು.

ಜಮ್ಮು ಮತ್ತು ಕಾಶ್ಮೀರದ ಉಧಂಪುರದಲ್ಲಿ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರೊಂದಿಗೆ ನಡೆದ ಆಚರಣೆಗಳ ನೇತೃತ್ವವನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ವಹಿಸಿದ್ದರು.ಯೋಗವನ್ನು ಸಂತರು ಮತ್ತು ಋಷಿಗಳಿಗೆ ಸೀಮಿತವೆಂದು ಪರಿಗಣಿಸಲಾಗಿದ್ದ ಕಾಲವಿತ್ತು. ಆದರೆ ಇಂದು, ಜನರು ನ್ಯೂಯಾರ್ಕ್‌ನ ಟೈಮ್ಸ್ ಸ್ಕ್ವೇರ್‌ನಿಂದ ಐಫೆಲ್ ಟವರ್ ಬಳಿಯ ಹುಲ್ಲುಹಾಸಿನವರೆಗೆ ಚಾಪೆಗಳ ಮೇಲೆ ಸೂರ್ಯ ನಮಸ್ಕಾರವನ್ನು ಮಾಡುತ್ತಿದ್ದಾರೆ. ಇದು ಪವಾಡಕ್ಕಿಂತ ಕಡಿಮೆಯೇ ಸಿಂಗ್ ಹೇಳಿದರು.

ಇದು ಭಾರತದ ಉದಯೋನ್ಮುಖ ಮೃದು ಶಕ್ತಿ, ಮತ್ತು ಯೋಗವು ಅದರ ಬಲವಾದ ರಾಯಭಾರಿಯಾಗಿದೆ ಎಂದು ಅವರು ಹೇಳಿದರು.ದೇಶಾದ್ಯಂತ ಯೋಗ ದಿನವನ್ನು ಬಹಳ ಉತ್ಸಾಹದಿಂದ ಆಚರಿಸಲಾಯಿತು ಎಂದು ಹಿರಿಯ ಸೇನಾ ಅಧಿಕಾರಿಯೊಬ್ಬರು ಹೇಳಿದರು.ಪ್ಯಾಂಗೊಂಗ್ ತ್ಸೊ ಸರೋವರದ ಅಂಚುಗಳಿಂದ ಪೋರ್ಟ್ ಬ್ಲೇರ್‌ವರೆಗೆ ಮತ್ತು ಅರುಣಾಚಲ ಪ್ರದೇಶದ ಕಿಬಿತುದಿಂದ ರಣ್ ಆಫ್ ಕಛ್‌ವರೆಗೆ ಸೈನಿಕರು ಯೋಗವನ್ನು ಪ್ರದರ್ಶಿಸಿದರು, ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಸ್ಥಿತಿಸ್ಥಾಪಕತ್ವಕ್ಕಾಗಿ ಪ್ರಾಚೀನ ಭಾರತೀಯ ಅಭ್ಯಾಸವನ್ನು ಅಳವಡಿಸಿಕೊಂಡರು ಎಂದು ಅಧಿಕಾರಿ ಹೇಳಿದರು.



# ಮನೆ ಹಂಚಿಕೆಗೆ ಲಂಚ ಆಡಿಯೋ ಸಿಎಂರಿಂದ ಕ್ರಮ

**ಬೆಂಗಳೂರು,ಜೂ.21–**ವಸತಿ ನಿಗಮದ ಮನೆ ಹಂಚಿಕೆಗೆ ಲಂಚ ನೀಡಲೇಬೇಕು ಎಂಬ ಶಾಸಕ ಬಿ.ಆರ್ ಪಾಟೀಲ್ ಅವರ ಆಡಿಯೋ ವೈರಲ್ ಆಗಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗಮನದಲ್ಲಿದೆ. ಅವರು ಈ ವಿಚಾರವಾಗಿ ಕ್ರಮಕೈಗೊಳ್ಳಲಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹೇಳಿದರು.

ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಾಸಕ ಬಿ.ಆರ್ ಪಾಟೀಲ್ ಏನು ಹೇಳಿದ್ದಾರೋ ನನಗೆ ಗೊತ್ತಿಲ್ಲ. ಇದು ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆ. ಶಾಸಕರು ಯಾವ ಉದ್ದೇಶದಲ್ಲಿ ಹೇಳಿದ್ದಾರೋ ನನಗೆ ಮಾಹಿತಿ ಇಲ್ಲ. ಏನೇ ಇರಲಿ ಅವರು ಮಾತನಾಡಿರುವುದು ಸರಿಯಲ್ಲ. ನಾನು ಇದನ್ನು ಖಂಡಿಸುತ್ತೇನೆ ಎಂದರು.

ವಸತಿ ಯೋಜನೆಗಳಲ್ಲಿ ಮನೆಗಳು ಪಾರದರ್ಶಕವಾಗಿ ಹಂಚಿಕೆಯಾಗುವಾಗ ಫಲಾನುಭವಿ ಹಣ ನೀಡಲು ಹೇಗೆ ಸಾಧ್ಯ. ವಸತಿ ಹಂಚುವ ನಿರ್ಧಾರ ಕೈಗೊಳ್ಳುವವರು ಪಂಚಾಯ್ತಿ ಹಾಗೂ ಸ್ಥಳೀಯ ಸಂಸ್ಥೆಗಳು ನಾನು ಮತ್ತು ಮುಖ್ಯಮಂತ್ರಿಗಳು ಈ ವಿಚಾರವಾಗಿ ಶಾಸಕರ ಜತೆ ಮಾತನಾಡುತ್ತೇನೆ ಎಂದರು.



**ಕಾಲವೇ ಉತ್ತರ ಕೊಡಲಿದೆ–** ಮೇಕೆದಾಟು ಯೋಜನೆ ಹೋರಾಟದ ಸಂದರ್ಭದಲ್ಲಿ ನಮಗೆ ಆಹ್ವಾನ ನೀಡಿಲ್ಲ. ಹೀಗಾಗಿ ಡಿಕೆ ಶಿವಕುಮಾರ್ ಅವರು ನೆಟ್ಟು ಬೋಲ್ಟು ಟೈಟ್ ಮಾಡುತ್ತೇವೆ ಎಂದು ಹೇಳಿರುವುದು ಸರಿಯಲ್ಲ ಎಂಬ ನಟ ಸುದೀಪ್ ಹೇಳಿಕೆಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಡಿ.ಕೆ ಶಿವಕುಮಾರ್‌ರವರು ನಾನು ಇದಕ್ಕೆ ಉತ್ತರ ಕೊಡಲ್ಲ. ಮಾತನಾಡಿದರೆ ಎಲ್ಲವನ್ನು ಬಿಚ್ಚಬೇಕಾಗುತ್ತದೆ. ನಾನು ಚಲನಚಿತ್ರ ವಾಣಿಜ್ಯ ಮಂಡಳಿಗೆ ಹೋಗಿ ಆಹ್ವಾನನೀಡಿದ್ದೆ. ಇತಿಹಾಸ ನೋಡಿಕೊಳ್ಳಲಿ. ದಾಖಲೆಗಳಲ್ಲಿ ಎಲ್ಲವೂ ಇದೆ. ಎಲ್ಲದಕ್ಕೂ ಕಾಲವೇ ಉತ್ತರ ಕೊಡಲಿದೆ ಎಂದರು.

**2022ಕ್ಕೆ ಕೋಲಾರಕ್ಕೆ ಎತ್ತಿನ ಹೊಳೆ ನೀರು–** ಎತ್ತಿಒನ ಹೊಳೆ ಯೋಜನೆಯನ್ನು 2027ಕ್ಕೆ ಪೂರ್ಣಗೊಳಿಸಿ ಕೋಲಾರ ಜಿಲ್ಲೆಗೆ ನೀರು ಹರಿಸಬೇಕು ಎಂಬುದು ನಮ್ಮ ಸರ್ಕಾರದ ಸಂಕಲ್ಪ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯರವರೂ ಸಹ ನಿನ್ನೆ ಸಭೆ ನಡೆಸಿ ಬೇರೆ ಯೋಜನೆಗಳು ವಿಳಂಬವಾದರೂ ಚಿಂತೆ ಇಲ್ಲ. ಎತ್ತಿನಹೊಳೆ ಯೋಜನೆಯನ್ನು ಆಧ್ಯತೆ ಮೇರೆಗೆ ಪೂರ್ಣಗೊಳಿಸುವಂತೆ ನಿರ್ದೇಶನ ನೀಡಿದ್ದಾರೆ ಎಂದರು.

ಈ ಯೋಜನೆಗೆ ಅರಣ್ಯ ಇಲಾಖೆ ಸಂಬಂಧಿತ ಸಮಸ್ಯೆಗಳು, ಭೂಸ್ವಾಧೀನ ಪ್ರಕ್ರಿಯೆ.ಬೈರಗೊಂಡಲು ಲಕ್ಕೇನಹಳ್ಳಿಯಲ್ಲಿ ಸಮತೋಲಿತ ಜಲಾಶಯ ನಿರ್ಮಾಣಕ್ಕೆ ಸಂಬಂಧಿಸಿದ ಭೂಸ್ವಾಧೀನ ಹಾಗೂ ಆರ್ಥಿಕ ವಿಚಾರವಾಗಿ ಚರ್ಚೆ ಮಾಡಿದ್ದೇವೆ. ಇಂದು ಕಾಮಗಾರಿ ಸ್ಥಳಕ್ಕೆ ಭೇಟಿ ನೀಡುತ್ತಿದ್ದೇನೆ.

ಯೋಜನೆಯಲ್ಲಿ ಮಾರ್ಪಾಟುಮಾಡಿರುವ ಅಂಶಗಳು ಸಚಿವರುಗಳ ಸಲಹೆಗಳು, ತಾಂತ್ರಿಕ ಅಂಶಗಳು ಎಲ್ಲವೂ ಇವೆ. ಇದೆಲ್ಲವನ್ನು ಅಧ್ಯಯನ ಮಾಡಿ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ವಿಚಾರ ಪ್ರಸ್ತಾಪಿಸುತ್ತೇನೆ ಎಂದರು.

# ಆಡಿಯೋ ಧ್ವನಿ ನನ್ನದೆ, ತನಿಖೆ ನಡೆಸಲಿ

**ಬೆಂಗಳೂರು,ಜೂ.21–**ವಸತಿ ಯೋಜನೆಗಳ ಮನೆ ಹಂಚಿಕೆಗೆ ಲಂಚ ನೀಡಬೇಕು ಎಂಬ ಆಡಿಯೊದಲ್ಲಿರುವುದು ನನ್ನದೇ ಧ್ವನಿ ಆಡಿಯೊದಲ್ಲಿ ಮಾತನಾಡಿರುವುದು ನಾನೇ ಎಂದು ಒಪ್ಪಿಕೊಂಡಿರುವ ಯೋಜನಾ ಆಯೋಗದ ಉಪಾಧ್ಯಕ್ಷ ಹಾ ಗೂ ಕಾಂಗ್ರೆಸ್ ಶಾಸಕ ಬಿ.ಆರ್ ಪಾಟೀಲ್ ಅವರು ನಾನು ಸತ್ಯ ಹೇಳಿದ್ದೇನೆ. ನನ್ನ ಹೇಳಿಕೆ ಬಗ್ಗೆ ತನಿಖೆ ನಡೆಸಲಿ. ನಾನು ಬೇಡ ಎನ್ನಲ್ಲ ಎಂದಿದ್ದಾರೆ.

ವಿಧಾನಸೌಧದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಸತಿ ಯೋಜನೆಗಳಿಗೆ ನನ್ನ ಕ್ಷೇತ್ರದಿಂದಷ್ಟೆ ಅಲ್ಲ, ಬೇರೆ ಕ್ಷೇತ್ರಗಳಲ್ಲೂ ಮನೆ ಹಂಚಿಕೆ ಮಾಡಲು ಹಣ ನೀಡಬೇಕು ಎಂದು ಹೇಳುವ ಮೂಲಕ ತಮ್ಮ ಆಡಿಯೊದಲ್ಲಿರುವ ಮಾತುಗಳನ್ನು ಸಮರ್ಥಿಸಿಕೊಂಡು ಈ ರೀತಿ ವಸತಿ ಇಲಾಖೆಯಲ್ಲಿ ನಡೆದಿಲ್ಲವಾದರೆ ಸಚಿವ ಜಮೀರ್ ತನಿಖೆ ಮಾಡಿಸಲಿ ಎಂದ ಅವರು, ಎಲ್ಲ ಸರ್ಕಾರದಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ. ಬಿಜೆಪಿಯವರೇನು ಸಾಚಾಗಳಲ್ಲ. ಅವರ ಕಾಲದಲ್ಲೂ ಇದೆಲ್ಲ ನಡೆದಿದೆ ಎಂದರು.

ನನ್ನ ಶಿಫಾರಸ್ಸುಗಳನ್ನು ಮನೆ ಹಂಚಿಕೆ ಸಂದರ್ಭದಲ್ಲಿ ಪರಿಗಣಿಸಿಲ್ಲ.ಗ್ರಾಮ ಪಂಚಾಯ್ತಿ ಅಧ್ಯಕ್ಷರ ಶಿಫಾರಸ್ಸನ್ನು ಪರಿಗಣಿಸಿದ್ದಾರೆ ಎಂದು ಅವರು ಹೇಳಿದರು.

ವಸತಿ ಇಲಾಖೆಯ ಲಂಚದ ಬಗ್ಗೆ ತಮ್ಮ ಆಡಿಯೊ ವೈರಲ್ ಆಗಿರುವ ಬಗ್ಗೆ ನಾನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಲ್ಲ. ಅವರು ಕರೆದರೆ ಹೋಗಿ ಭೇಟಿ ಮಾಡಿ ಎಲ್ಲವನ್ನೂ ವಿವರಿಸುತ್ತೇನೆ ಎಂದು ಶಾಸಕ ಬಿ.ಆರ್ ಪಾಟೀಲ್ ಹೇಳಿದರು.



# ಹಿಂದೂ ಧರ್ಮ, ಸಂಸ್ಕೃತಿ ಉಳಿಸಲು ಶಿಕ್ಷಣ ಕ್ಷೇತ್ರದಿಂದ ಸಾಧ್ಯ

**ಬೆಳ್ತಂಗಡಿ,ಜೂ.21–** ಪವಿತ್ರವಾದ ಹಿಂದೂ ಧರ್ಮ, ಸಂಸ್ಕೃತಿ ಉಳಿಸುವ ಕೆಲಸ ಶಿಕ್ಷಣ ಕ್ಷೇತ್ರದಿಂದ ಸಾಧ್ಯ. ಅಂತಹ ಕಾರ್ಯವನ್ನು ಶ್ರೀರಾಮ ಶಾಲೆ ಮಾಡುತ್ತಿದೆ ಎಂದು ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ.ಪ್ರಭಾಕರ ಭಟ್ ಕಲ್ಲಡ್ಕ ಹೇಳಿದ್ದಾರೆ.

ಸುಲ್ಕೇರಿಯ ಅನುದಾನಿತ ಖಾಸಗಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಶ್ರೀರಾಮ ಪ್ರೌಢಶಾಲೆಯಲ್ಲಿ ಗುರುವಾರ ನಡೆದ ಪ್ರವೇಶೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮಕ್ಕಳನ್ನು ಸರಿದಾರಿಗೆ ತರುವುದು ಅಥವಾ ಹಾಳು ಮಾಡುವುದು ಪೋಷಕರ ಕೈಯಲ್ಲಿಯೇ ಇದೆ. ಇಲ್ಲಿನ ಶಾಲೆಯಲ್ಲಿ ಸಂಸ್ಕಾರಕ್ಕೆ ಹೆಚ್ಚು ಒತ್ತು ನೀಡಲಾಗುತ್ತದೆ. ಇದನ್ನು ಮಕ್ಕಳು ಮನೆಯಲ್ಲೂ ಅನುಸರಿಸುವಂತಾಗ ಬೇಕಾದರೆ ತಾಯಂದಿರ ಪಾತ್ರ ಮುಖ್ಯವಾಗುತ್ತದೆ. ಭಜನೆ ಮಾಡುವ ಹೊತ್ತಿನಲ್ಲಿ ಟಿ.ವಿ. ಮುಂದೆ ಕುಳಿತುಕೊಳ್ಳವುದು ಎಷ್ಟಕ್ಕೂ ಸರಿಯಲ್ಲ. ಮಗುವಿನ ಸಂಸ್ಕಾರಯುತ ಬೆಳವಣಿಗೆಯನ್ನು ಮೊದಲು ತಾಯಂದಿರು ಪ್ರೋತ್ಸಾಹಿಸಬೇಕು. ಮಕ್ಕಳು ದೀಪಗಳಂತೆ, ಹಿಂದುತ್ವದ ಶಿಕ್ಷಣ ಪಡೆದವರು ಜಗತ್ತಿಗೆ ಮಾದರಿಯಾಗುತ್ತಾರೆ ಎಂದರು.

ಅಳದಂಗಡಿ ಸತ್ಯದೇವತೆ ದೈವಸ್ಥಾನದ ಆಡಳ್ತೆದಾರ ಶಿವಪ್ರಸಾದ ಅಜಿಲ, ಕಾರ್ಕಳ ಕಮಲಾಕ್ಷ ಕಾಮತ್, ಕೆ.ಎಸ್.ಹೆಗ್ಡೆ ವೈದ್ಯಕೀಯ ಮಹಾವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಡಾ.ಶ್ರೀಪಾದ ಜಿ. ಮೆಹೆಂದಳೆ, ನಾರಾವಿ ಸಿ.ಎ.ಬ್ಯಾಂಕಿನ ಅಧ್ಯಕ್ಷ ಸುಧಾಕರ ಭಂಡಾರಿ, ಶಿರ್ಲಾಲು ಸಿ.ಎ. ಬ್ಯಾಂಕ್



ಅಧ್ಯಕ್ಷ ಸುಧೀರ್ ಸುವರ್ಣ, ಶಾಲಾ ಆಡಳಿತ ಮಂಡಳಿ ಗೌರವಾಧ್ಯಕ್ಷ ಗಣೇಶ್ ಹೆಗ್ಡೆ ನಾರಾವಿ, ಅಧ್ಯಕ್ಷ ರಾಜು ಪೂಜಾರಿ ವೇದಿಕೆಯಲ್ಲಿದ್ದರು. ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯ ರಮೇಶ್ ಉಪಸ್ಥಿತರಿದ್ದರು.ಪ್ರೌಢಶಾಲಾ ಮುಖ್ಯೋಪಾಧ್ಯಾಯ ಪ್ರಮೋದ್ ಕುಮಾರ್ ಸ್ವಾಗತಿಸಿದರು. ಶಿಕ್ಷಕಿ ಶಶಿಕಲಾ ವಂದಿಸಿದರು. ಶಿಕ್ಷಕಿ ಹೇಮಲತಾ ಕಾರ್ಯಕ್ರಮ ನಿರ್ವಹಿಸಿದರು.

# ಬಾಲಕಾರ್ಮಿಕ, ಕಿಶೋರ ಕಾರ್ಮಿಕತೆ ನಿರ್ಮೂಲನೆಯ ಆಟೋ ಪ್ರಚಾರದ ಜನಜಾಗೃತಿ

**ರಾಯಚೂರು,ಜೂ.21–** ಮಾನ್ವಿ ತಾಲೂಕಿನಲ್ಲಿ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕತೆ ನಿರ್ಮೂಲನೆಯ ಆಟೋ ಪ್ರಚಾರದ ಜನಜಾಗೃತಿ ಸಂಚಾರಿ ವಾಹನಕ್ಕೆ ಜೂನ್ 19ರಂದು ಮಾನವಿಯ ಗ್ರೇಡ್–2 ತಹಶೀಲ್ದಾರ ಅಬ್ದುಲ್ ವಾಹಿದ್ ಅವರು ರಿಬ್ಬನ್ ಕತ್ತರಿಸಿ ಚಾಲನೆ ನೀಡಿದರು.

ಈ ವೇಳೆ ಅವರು ಮಾತನಾಡಿ, ಮಕ್ಕಳನ್ನು ಯಾವುದೇ ಕಾರಣಕ್ಕೂ ಕೆಲಸಕ್ಕೆ ಕಳುಹಿಸದೇ ಕಡ್ಡಾಯವಾಗಿ ಶಾಲೆಗೆ ಕಳುಹಿಸಬೇಕು. ಮಕ್ಕಳು ತಮ್ಮ ಬಾಲ್ಯವನ್ನು ಶಿಕ್ಷಣ ಮತ್ತು ಆಟದ ಜೊತೆಗೆ ಕಳೆಯಬೇಕು. ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಮಾಲೀಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸುವುದು ಪೋಷಕರ ಆದ್ಯ ಕರ್ತವ್ಯವಾಗಿರುತ್ತದೆ ಎಂದು ತಿಳಿಸಿದರು.

ಈ ಸಂಚಾರಿ ಜನಜಾಗೃತಿ ವಾಹನವು ಎಸ್.ಸಿ ಮತ್ತು ಎಸ್.ಟಿ ಜನಾಂಗದವರು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿ ಮಾನವಿ ತಾಲೂಕಿನಾದ್ಯಂತ 02 ದಿನಗಳ ಕಾಲ ಸಂಚರಿಸಲಿದೆ. ಇದೆ ವೇಳೆ ಕರಪತ್ರಗಳನ್ನು ಹಂಚುವುದರ ಮೂಲಕ ಮತ್ತು ಸ್ಟಿಕ್ಕರ್‌ಗಳನ್ನು ಅಂಟಿಸುವ ಮುಖಾಂತರ ಜನಜಾಗೃತಿ ಮೂಡಿಸಲಾಗುತ್ತಿದೆ. ಮಕ್ಕಳನ್ನು ಕೆಲಸಕ್ಕೆ ಕಳುಹಿಸದೇ ಶಾಲೆಗೆ ಕಳುಹಿಸಬೇಕು ಎಂದು ಜನರಲ್ಲಿ ತಿಳಿಸುವ ಕಾರ್ಯಕ್ರಮ ಇದಾಗಿದೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕರಾದ ಮಂಜುನಾಥ ರೆಡ್ಡಿ, ಮಾನವಿಯ ಕಾರ್ಮಿಕ ನಿರೀಕ್ಷಕರಾದ ಮಲ್ಲಪ್ಪ, ಶಿಕ್ಷಣ ಇಲಾಖೆಯ ಸೋಮಶೇಖರ ಹಾಗೂ ಹಾಲೇಶ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ರಾಜಶೇಖರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಾದ ಸರಿತಾ ಹಾಗೂ ಶಿವಶಂಕರ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

# ಯೋಗ ದಿನಾಚರಣೆ



**ದೇವದುರ್ಗ,ಜೂ.21–**ಶ್ರೀಖೇಣೇದ್ ಮುರಿಗೆಪ್ಪ ಮಹಾವಿದ್ಯಾಲಯದಲ್ಲಿಅಂತರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಪತಂಜಲಿ ಯೋಗ ಶಿಕ್ಷಕರಾದ ವೆಂಕಟೇಶ್ ಇರಬಗೇರಾ,, ಶ್ಯಾಮರಾವ್ ಕುಲಕರ್ಣಿ, ಖೇಣೇದ್ ಕಾಲೇಜ್ ಸಂಯೋಜಕ ಬಸವರಾಜ ಯಾಟಗಲ್, ಪ್ರಾಚಾರ್ಯರಾದ,, ಸಿದ್ದಲಿಂಗೇಶ್ವರ, ಶಿವಪ್ರಸಾದ್ ನಾಗಲಿಕರ್, ಪ್ರಗತಿ ವಿರೇಶ್ ಪೂಜಾರಿ, ಶಿವುಕುಮಾರ ಪಾಟೀಲ್, ಎಲ್ಲಾ ಉಪನ್ಯಾಸಕರು, ಶಿಕ್ಷಕರು, ಪಾಲಕರು, ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಯೋಗ ರೋಗವನ್ನು ದೂರ ಮಾಡುತ್ತದೆ



ಯುವ ಮಾರ್ಗ ಸುದ್ದಿ

**ರಾಯಚೂರು,ಜೂ.21–**ತಾಲೂಕಿನ ಪಿ.ಎಂ.ಶ್ರೀ. ದುಗನೂರು ಶಾಲೆಯಲ್ಲಿ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ, ಶಾಲೆಯ ಮುಖ್ಯಗುರುಗಳಾದ ಗಫೂರ್ ಅವರು ಯೋಗ ಕಾರ್ಯಕ್ರಮ ಆರಂಭಿಸುವ ಮೊದಲು ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು. ಯೋಗವು ಕೆಲವು ಕಾಯಿಲೆಗಳಿಗೆ ಪರಿಹಾರ ನೀಡುತ್ತದೆ ಮತ್ತು ಆರೋಗ್ಯವನ್ನು ಸುಧಾರಿಸುತ್ತದೆ ಎಂದು ಅವರು ತಿಳಿಸಿದರು. ಯೋಗಾಭ್ಯಾಸದಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ಉತ್ತಮಗೊಳ್ಳುತ್ತದೆ ಎಂದು ಮುಖ್ಯಗುರುಗಳು ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟರು.

ನಂತರ, ಶಾಲೆಯ ದೈಹಿಕ ಶಿಕ್ಷಕ ನರೇಶ ಕುಮಾರ್ ಅವರು ಯೋಗದಿಂದ ಆಗುವ ಉಪಯೋಗಗಳು ಮತ್ತು ಲಾಭಗಳ ಬಗ್ಗೆ ಮಕ್ಕಳಿಗೆ ವಿವರವಾಗಿ ತಿಳಿಸಿದರು. ಯೋಗದಿಂದ ಮನಸ್ಸು ಉಲ್ಲಾಸ ಮತ್ತು ಸಾಮರಸ್ಯದಿಂದ ಇರಲು ಸಾಧ್ಯ ಎಂದು ಅವರು ಹೇಳಿದರು.

ಈ ಯೋಗ ಕಾರ್ಯಕ್ರಮದಲ್ಲಿ ಮುಖ್ಯಗುರುಗಳಾದ ಗಫೂರ್, ಶಾಲಾ ಸಿಬ್ಬಂದಿಗಳಾದ ಸಂಪತರಾಜ್, ಚಂದ್ರಶೇಖರ್ ನಾಯಕ್, ಮಲ್ಲೇಶ, ಅಂಜಿನೇಯ್ಯ, ನರಸಮ್ಮ, ನಿರೋಶ, ಸ್ಟೆಲ್ಲಾಮೇರಿ, ಅಮೃತ, ತಾಯಮ್ಮ ಮತ್ತು ಮಮತಾ ಅವರು ಭಾಗವಹಿಸಿ, ಯೋಗ ದಿನಾಚರಣೆಯನ್ನು ಯಶಸ್ವಿಗೊಳಿಸಿದರು.

# ವಿದ್ಯಾರ್ಥಿಗಳು ಉತ್ತಮ ಆರೋಗ್ಯಕ್ಕಾಗಿ ಯೋಗ ಅಭ್ಯಾಸ ಮಾಡಿ –ಕೆ.ಈ.ನರಸಿಂಹ

ಯುವ ಮಾರ್ಗ ಸುದ್ದಿ

**'ಮಾನ್ವಿ:–** ನಮ್ಮ ದೇಶದ ಪ್ರಾಚೀನ ಜ್ಞಾನ ಯೋಗದಿಂದ ಸರ್ವರಿಗೂ ಉಪಯೋಗ 'ವಿದೆ. ವಿಶೇಷವಾಗಿ ವಿದ್ಯಾರ್ಥಿಗಳು ಉತ್ತಮ ಆರೋಗ್ಯ,ಒಳ್ಳೆಯ ಮಾನಸಿಕ ಗಟ್ಟಿತನಕ್ಕಾಗಿ ಯೋಗದ ಅಭ್ಯಾಸ ಮಾಡಬೇಕು ಎಂದು ಕೆ.ಈ.ನರಸಿಂಹ ಹೇಳಿದರು.

ಅವರು ಶನಿವಾರ ನೇತಾಜಿ ಶಿಕ್ಷಣ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ವಿಶ್ವ ಯೋಗ ದಿನಾಚರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಇಂದು ಇಡೀ ವಿಶ್ವ ಯೋಗದ ಮಹತ್ವವನ್ನು ಅರಿತಿದೆ. ಪ್ರತಿಯೊಬ್ಬರ ಮನೆಯಲ್ಲೂ ಯೋಗದ ಅಭ್ಯಾಸ ನಡೆಯಬೇಕು ಎಂದು ಅವರು ಹೇಳಿದರು.



ಈ ಸಂದರ್ಭದಲ್ಲಿ ನೇತಾಜಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀಮತಿ ಕೆ.ವಿಜಯಲಕ್ಷ್ಮೀ, ಸಹ ಕಾರ್ಯದರ್ಶಿಗಳಾದ ಕೆ.ರವಿವರ್ಮಾ, ಪತಂಜಲಿ ಯೋಗ ಸಮಿತಿಯ ಶ್ರೀಮತಿ ಅನುರಾಧ ಸೂಗಪ್ಪಗೌಡ, ಮತ್ತು ರಾಯಚೂರಿನ ಯೋಗ ತರಬೇತಿದಾರ ವಿನೋದ ವಿದ್ಯಾರ್ಥಿಗಳಿಗೆ ಯೋಗದ ತರಬೇತಿ ನೀಡಿದರು.

# ರಾಯಚೂರಿನಲ್ಲಿ ವಿಜೃಂಭಣೆಯಿಂದ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ



ಯುವ ಮಾರ್ಗ ಸುದ್ದಿ

**ರಾಯಚೂರು,ಜೂ.21–** ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ರಾಯಚೂರು ಹಾಗೂ ಲೈನ್ಸ್‌ಟ್ರೋನ್ ಸಹಯೋಗದಲ್ಲಿ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಸ್ಥೆಯ ವ್ಯವಸ್ಥಾಪಕರಾದ ಸುರೇಶ್ ಅವರು ಮಾತನಾಡಿ, "ಇಂದು ನಾವು ಅಂತರಾಷ್ಟ್ರೀಯ ಯೋಗ ದಿನವನ್ನು ಆಚರಿಸುತ್ತಿದ್ದೇವೆ. ಯೋಗದ ಮಹತ್ವವನ್ನು ವಿಶ್ವಕ್ಕೆ ಪ್ರಚಾರ ಮಾಡಿದ್ದು ಭಾರತ ಎಂಬುದು ನಮಗೆ ಹೆಮ್ಮೆಯ ವಿಷಯ" ಎಂದು ಹೇಳಿದರು.

ಸಂಸ್ಥೆಯ ಸಂಯೋಜಕರಾದ ವಿನಾಯಕ. ಆರ್ ಅವರು ಮಾತನಾಡಿ, "ಪ್ರಸ್ತುತ 175ಕ್ಕೂ ಹೆಚ್ಚು ದೇಶಗಳು ಈ ಯೋಗ ದಿನಾಚರಣೆಯಲ್ಲಿ ಪಾಲ್ಗೊಳ್ಳುತ್ತಿವೆ. ಇದು ಭಾರತೀಯ ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸುವ ಒಂದು ಉತ್ತಮ ಅವಕಾಶವಾಗಿದೆ. ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಯೋಗ ವಿದ್ಯೆಯ ಕುರಿತು ಅನೇಕ ಗ್ರಂಥಗಳಲ್ಲಿ ಉಲ್ಲೇಖವಿದೆ. ಯೋಗಾಭ್ಯಾಸದಿಂದ ದೀರ್ಘಾಯುಷ್ಯ ಸಾಧ್ಯ ಎಂಬುದಕ್ಕೆ ನೂರಾರು ಉದಾಹರಣೆಗಳಿವೆ. ಮನಸ್ಸಿನ ಏಕಾಗ್ರತೆಗೆ ಯೋಗ ಸಹಕಾರಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಮಾನಸಿಕ ಒತ್ತಡಗಳನ್ನು ನಿವಾರಿಸಲು ಯೋಗವು ಅತ್ಯುತ್ತಮ ಮದ್ದು ಎಂದರೆ ತಪ್ಪಾಗುವುದಿಲ್ಲ" ಎಂದು ತಿಳಿಸಿದರು.

"ಇಂದು ದೇಶದಾದ್ಯಂತ ಯೋಗ ಕಾರ್ಯಕ್ರಮಗಳ ಮೂಲಕ ಯೋಗದ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ಉತ್ತಮ ಆರೋಗ್ಯ ಮತ್ತು ಉತ್ತಮ ಜೀವನಕ್ಕೆ ಯೋಗವು ಅತ್ಯಂತ ಸಹಕಾರಿಯಾಗಿದೆ. ಮುಂದಿನ ಪೀಳಿಗೆಗೆ ಇದರ ಮಹತ್ವವನ್ನು ತಲುಪಿಸುವುದು ನಮ್ಮೆಲ್ಲರ ಜವಾಬ್ದಾರಿ. ನಾವೆಲ್ಲರೂ ಇಂದು ಯೋಗ ಮಾಡುವ ಮೂಲಕ ಇದರ ಮಹತ್ವದ ಸಂದೇಶವನ್ನು ಸಾರೋಣ" ಎಂದರು.

ಈ ಸಂದರ್ಭದಲ್ಲಿ ಸಂಯೋಜಕರಾದ ಮಮತಾ ಅವರು ಯೋಗಾಸನಗಳನ್ನು ಮಾಡಿಸುವ ಮೂಲಕ ಯೋಗ ದಿನವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀಮತಿ ನಯನಾ, ರೇಣುಕಾ, ಭೀಮಯ್ಯ, ಈರಣ್ಣ, ರಾಜೇಶ್, ಮತ್ತು ಲಿಂಗಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಒಂದು ಭೂಮಿ ಒಂದು ಆರೋಗ್ಯಕ್ಕಾಗಿ ಯೋಗ

ಯುವ ಮಾರ್ಗ ಸುದ್ದಿ

**ಮಾನ್ವಿ, ಜ. 21–** ನಗರದ ಕಲ್ಮಠ ವಿರೂಪಾಕ್ಷ ಶಿವಾಚಾಯ್ರ್ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಆವರಣದಲ್ಲಿ 11ನೇ ವಿಶ್ವ ಯೋಗ ದಿನಾಚರಣೆಯನ್ನು 'ಒಂದು ಭೂಮಿ, ಒಂದು ಆರೋಗ್ಯಕ್ಕಾಗಿ ಯೋಗ' ಎಂಬ ಶೀರ್ಷಿಕೆಯಡಿಯಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು.



ಈ ವರ್ಷದ ಯೋಗ ದಿನಾಚರಣೆಯು ವಿಶೇಷವಾಗಿ ಮಹಿಳಾ ಯೋಗ ಶಿಕ್ಷಕರಿಂದ ಮಹಿಳೆಯರಿಗಾಗಿ ಐದು ದಿನಗಳ ಯೋಗ ಶಿಬಿರದೊಂದಿಗೆ ಆಯೋಜಿಸಲಾಗಿತ್ತು. ಪತಂಜಲಿ ಯೋಗ ಶಿಕ್ಷಕರಾದ ಅನುರಾಧ ಪಾಟೀಲ್ ಅವರು ಕಾರ್ಯಕ್ರಮದಲ್ಲಿ ಯೋಗ ತರಬೇತಿಯನ್ನು ನೀಡಿದರು. ಮಹಿಳೆಯರ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳಿಗೆ ದಿನನಿತ್ಯದ ಯೋಗಾಭ್ಯಾಸವು ಹೇಗೆ ಪರಿಹಾರ ನೀಡಬಲ್ಲದು ಎಂಬುದನ್ನು ಅವರು ಈ ಸಂದರ್ಭದಲ್ಲಿ ವಿವರಿಸಿದರು.

ಆಯುರ್ವೇದಿಕ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಜೀವನೇಶ್ವರಯ್ಯ ಅವರು ಮಾತನಾಡಿ, "ಯೋಗದಿಂದ ಕೇವಲ ದೈಹಿಕವಾಗಿ ಸದೃಢವಾಗುವುದಲ್ಲದೆ, ಮಾನಸಿಕವಾಗಿಯೂ ಸದೃಢ ಸಮಚಿತ್ತವನ್ನು ಸಾಧಿಸಬಹುದು ಎಂಬ ಉದ್ದೇಶದಿಂದ ವಿಶ್ವ ಯೋಗ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ಇಂದಿನ ಒತ್ತಡದ ಜೀವನ ಶೈಲಿಯಲ್ಲಿ ಪ್ರತಿದಿನ ಯೋಗ ಮಾಡುವುದರಿಂದ ಮಾನಸಿಕ ಮತ್ತು ದೈಹಿಕವಾಗಿ ಸದೃಢರಾಗಿರಲು ಸಾಧ್ಯವಾಗುತ್ತದೆ" ಎಂದು ಹೇಳಿದರು. ಈ ಕಾರ್ಯಕ್ರಮವನ್ನು ಲಯನ್ಸ್ ಕ್ಲಬ್ ಮಾನವಿ, ಭಾರತ್ ವಿಕಾಸ್ ಪರಿಷತ್ ಮಾನವಿ, ಪತಂಜಲಿ ಮಹಿಳಾ ಯೋಗ ಸಮಿತಿ ಮಾನವಿ ಮತ್ತು ಆಯುರ್ವೇದಿಕ್ ಕಾಲೇಜಿನ ಎನ್.ಎಸ್.ಎಸ್. ಘಟಕದ ಸಹಯೋಗದೊಂದಿಗೆ ಯಶಸ್ವಿಯಾಗಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಡಾ. ಜೀವನೇಶ್ವರಯ್ಯ,ಪ್ರಾಚಾರ್ಯರು, ಆಯುರ್ವೇದಿಕ್ ಕಾಲೇಜ್, ಉಮಾಶಂಕರ ಹೆಚ್.ಎಂ.ಆಡಳಿತಾಧಿಕಾರಿಗಳು, ಆಯುರ್ವೇದಿಕ್ ಕಾಲೇಜ್ ಮತ್ತು ಲಯನ್ಸ್ ಕ್ಲಬ್ ಕಾರ್ಯದರ್ಶಿಗಳು, ಚನ್ನಬಸವರಾಜ್ ಹೆಚ್. ಅಧ್ಯಕ್ಷರು, ಭಾರತೀಯ ವಿಕಾಸ ಪರಿಷತ್, ಎ.ವೈ. ದೇವರಮನಿ ಲಯನ್ಸ್ ಕ್ಲಬ್ ಸದಸ್ಯರು, ಸೂಗಪ್ಪಗೌಡ, ಶಂಕ್ರಯ್ಯ ಹಿರೇಮಠ, ಡಾ. ಸುರೇಶರಾವ್ ದೇಶಪಾಂಡೆ, ಡಾ. ಫನಿಕುಮಾರ್, ಡಾ. ಪ್ರಿಯಾಂಕ, ಡಾ. ಪೃಥ್ವಿಕುಮಾರ, ಡಾ. ವಿಕ್ರಮಾದಿತ್ಯ ಜಾಂಗೀರ್, ಡಾ. ಸಮಂತ್ರಿ ಜ್ಯೋತಿ ಮತ್ತು ಆಯುರ್ವೇದಿಕ್ ಕಾಲೇಜಿನ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು.

# ಯುವ ಸಬಲೀಕರಣ, ಕ್ರೀಡಾ ಇಲಾಖೆಯಿಂದ ಅರ್ಜಿ ಆಹ್ವಾನ

**ರಾಯಚೂರು,ಜೂ.21–**025–26ನೇ ಸಾಲಿನ ರಾಜ್ಯ ಯುವನೀತಿ–2012 ಅನುಷ್ಠಾನದಡಿ ನಮ್ಮೂರ ಶಾಲೆ ನಮ್ಮ ಯುವಜನರು ಯೋಜನೆಯನ್ನು 2017–18ನೇ ಸಾಲಿನಿಂದ ಅನ್ವಯಿಸುವಂತೆ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಶಿಕ್ಷಣ ಇಲಾಖೆ ಹಾಗೂ ಮಾನ್ಯತೆ ಪಡೆದಿರುವ ಕ್ರೀಡಾ ಸಂಸ್ಥೆಗಳು ಆಯೋಜಿಸುವ ತಾಲ್ಲೂಕು, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡಾಕೂಟಗಳಲ್ಲಿ ಉತ್ತಮ ಸಾಧನೆ ತೋರುವ ಕ್ರೀಡಾಪಟುಗಳನ್ನು ಹೊಂದಿರುವ ಜಿಲ್ಲೆಯಿಂದ ಒಂದು ಶಾಲೆಯನ್ನು ಗುರುತಿಸಿ ಆಯ್ಕೆಯಾದ ಶಾಲೆಗೆ ಪ್ರೋತ್ಸಾಹವಾಗಿ ತಲಾ ರೂ.1 ಲಕ್ಷದಂತೆ ಸರ್ಕಾರದಿಂದ ಪ್ರೋತ್ಸಾಹಧನವನ್ನು ನೀಡಲು ತೀರ್ಮಾನಿಸಿದೆ.

ಈ ಅನುದಾನದಲ್ಲಿ ರೂ.10,000 ಗಳನ್ನು ಆಯ್ಕೆಯಾದ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರಿಗೆ ಮತ್ತು ರೂ.90,000 ಗಳನ್ನು ಶಾಲೆಯ ಎಸ್.ಡಿ.ಎಮ್.ಸಿ ಗೆ ಅಗತ್ಯ ಕ್ರೀಡಾ ಸಾಮಾಗ್ರಿಗಳ ಖರೀದಿ ಮಾಡುವ ಮಾರ್ಗಸೂಚಿಯನ್ನು ಪರಿಷ್ಕರಿಸಿದೆ. ಜಿಲ್ಲೆಯ ಅರ್ಹ ಶಾಲೆಗಳು ಜೂನ್ 27 ರೊಳಗಾಗಿ ಪ್ರಶಸ್ತಿ ಪತ್ರಗಳು ಎಲ್ಲಾ ದಾಖಲೆಗಳು, ಮುಖ್ಯೋಪಾಧ್ಯಾಯರು ಮತ್ತು ಎಸ್.ಡಿ.ಎಮ್.ಸಿ ಅಧ್ಯಕ್ಷರ ಜಂಟಿ ಖಾತೆ ಪಾಸ್ ಬುಕ್ ನಕಲು ಪ್ರತಿ ಸೇರಿ ಇತರೆ ದಾಖಲೆಗಳನ್ನು ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಯಚೂರು ಇವರಿಗೆ ಸಲ್ಲಿಸುವುದು. ಹಾಗೊಂದು ವೇಳೆ ಅಪೂರ್ಣ ಮತ್ತು ತಡವಾಗಿ ಬರುವ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿ ಹಾಗೂ ಇನ್ನಿತರ ವಿವರಗಳಿಗಾಗಿ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣ, ರಾಯಚೂರು ಇಲ್ಲಿ ಕಚೇರಿಯ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ್ಲ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಒಣಮೆಣಸಿನಕಾಯಿ ಉತ್ಪನ್ನ ಖರೀದಿಗೆ ಆದೇಶ: ರೈತರಿಗೆ ಸೂಚನೆ

**ರಾಯಚೂರು.ಜೂ.21–** 2024–25ನೇ ಸಾಲಿನ ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯ ಬೆಲೆ ವ್ಯತ್ಯಾಸ ಪಾವತಿ ಯೋಜನೆಯಡಿ ಒಣಮೆಣಸಿನಕಾಯಿ ಉತ್ಪನ್ನವನ್ನು ಪ್ರತಿ ಕ್ವಿಂಟಲಿಗೆ ರೂ.10,589 ದಂತೆ ಖರೀದಿಸಲು ಆದೇಶವಿದ್ದು, ಪ್ರತಿ ಎಕರೆಗೆ 15 ಕ್ವಿಂಟಾಲ್ ಇಳುವರಿಯಂತೆ ಪ್ರತಿ ರೈತರಿಂದ ಗರಿಷ್ಟ 30 ಕ್ವಿಂಟಾಲ್ ಗೆ ಮಿತಿಗೊಳಿಸಿ ವ್ಯತ್ಯಾಸದ ಮೊತ್ತ ನೀಡಲಾಗುವುದು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಈ ಯೋಜನೆಯಡಿಯಲ್ಲಿ ಮಾರಾಟ ಮಾಡಲು ಬರುವ ರೈತರ ನೋಂದಣಿ ಕಾರ್ಯವನ್ನು ಎನ್‌ಇಎಂಎಲ್ ತಂತ್ರಾಂಶದಲ್ಲಿ ಮಾಡಿ ನಂತರ ಒಣಮೆಣಸಿನಕಾಯಿ ಉತ್ಪನ್ನದ ಗೇಟ್ ಎಂಟ್ರಿಯನ್ನು ಯುಎಂಪಿ ತಂತ್ರಾಂಶದಡಿಯಲ್ಲಿ ದಾಖಲಿಸುವ ಕಾರ್ಯವನ್ನು ಆಯಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಯವರು ಕಡ್ಡಾಯವಾಗಿ ನಿರ್ವಹಿಸುವುದು.

ಇ–ಆಡಳಿತ ಇಲಾಖೆಯ ಫ್ರುಟ್ಸ್ ತಂತ್ರಾಂಶದಲ್ಲಿ ರೈತರು ನೀಡಿರುವ ವಿವರಗಳನ್ನು ಭೂಮಿ, ಯುಐಡಿಎಐ ಮತ್ತು ಬೆಳೆ ಸಮೀಕ್ಷೆ ದತ್ತಾಂಶದೊಂದಿಗೆ ಹೊಂದಾಣಿಕೆ ಮಾಡಿ, ಅರ್ಹ ಫಲಾನುಭವಿಗಳ ಪಟ್ಟಿಯನ್ನು ಅಂತಿಮಗೊಳಿಸಿ ಯುಎಂಪಿ ತಂತ್ರಾಂಶದ ಇ–ಟೆಂಡರ್ ಮೂಲಕ ಮಾರಾಟ ಪ್ರಕ್ರಿಯೆ ಕೈಗೊಳ್ಳಲಾಗುವುದು.

ರೈತ ಬಾಂಧವರು ಆಧಾರ್ ಕಾರ್ಡ್, ಮೊಬೈಲ್ ಸಂಖ್ಯೆ ಮತ್ತು ಪಹಣಿಯೊಂದಿಗೆ ತಮ್ಮ ಹತ್ತಿರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ನೋಂದಾಯಿಸಿ ಒಣಮೆಣಸಿನಕಾಯಿ ಮಾರಾಟ ಮಾಡಿ ಸರ್ಕಾರದ ಯೋಜನೆಯ ಸದುಪಯೋಗ ಪಡೆದುಕೊಳ್ಳಲು ಜಿಲ್ಲೇಯ ರೈತ ಬಾಂಧವರಲ್ಲಿ ಕೋರಲಾಗಿದೆ ಎಂದು ರಾಯಚೂರ ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಪಾಯಕಾರಿ ಮರಗಳ ತೆರವಿಗೆ ಸಾರ್ವಜನಿಕರಿಂದ ಆಕ್ಷೇಪಣೆ ಆಹ್ವಾನ

**ರಾಯಚೂರು,ಜೂ.21–**ಜಿಲ್ಲೆಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿಯ, ಪ್ರಾದೇಶಿಕ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಬರುವ ರಾಯಚೂರ ತಾಲೂಕಿನ ಆರ್‌ಟಿಪಿಎಸ್ ಕಾಲೋನಿಯಲ್ಲಿ ಟೈಪ್–3, ಟೈಪ್–4, ಟೈಪ್–6, ಟೈಪ್–5 ಮತ್ತು ಟೈಪ್–7, ಮನೆಗಳ ಸುತ್ತಲು ಇರುವ ಅಪಾಯಕಾರಿ ನೀಲಗಿರಿ ಹಾಗೂ ಇತರೆ ಜಾತಿಯ ಒಟ್ಟು 74 ಮರಗಳ ತೆರವಿಗೆ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ 1976 ಕಲಂ 8(3)(1/11)ರ ಅಡಿಯಲ್ಲಿ ಅನುಮತಿ ನೀಡಬೇಕಾಗಿದೆ. ಇದಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರು ತಮ್ಮ ಸಲಹೆ, ಅಭಿಪ್ರಾಯ ಮತ್ತು ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ತಾಲೂಕಿನ ಪ್ರಾದೇಶಿಕ ಅರಣ್ಯ ವಿಭಾಗದ ಕಚೇರಿಗೆ ಜೂನ್ 30ರೊಳಗಾಗಿ ಸಲ್ಲಿಸಬೇಕೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಬಕಾರಿ ದಾಳಿ : 6 ಲೀ.ಕಳ್ಳಭಟ್ಟಿ ಸಾರಾಯಿ ಜಪ್ತಿ

**ವಿಜಯಪುರ,ಜೂ.21–** ವಿಜಯಪುರ ಅಬಕಾರಿ ಇಲಾಖೆ ಅಧಿಕಾರಿಗಳು ತಿಕೋಟಾ ತಾಲೂಕಿನ ಕಳ್ಳಕವಟಗಿ ತಾಂಡಾ–2ರ ಮನೆಯೊಂದರ ಮೇಲೆ ದಾಳಿ ನಡೆಸಿ, 06 ಲೀ. ಕಳ್ಳಭಟ್ಟಿ ಸಾರಾಯಿ ಜಪ್ತಿ ಮಾಡಿಕೊಂಡು ಆರೋಪಿತ ಅನೀಲ ಪವಾರ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ದಾಳಿಯಲ್ಲಿ ಅಬಕಾರಿ ಉಪ ನಿರೀಕ್ಷಕ ಅನೀಲ ಪತ್ತಾರ, ಮುಖ್ಯ ಪೇದೆಗಳಾದ ಎ.ಎ.ನಾಗೂರ, ಎಂ.ಎಸ್.ಕೊಟ್ಟಲಗಿ, ಶ್ರೀಶೈಲ ಬಂಡಗಾರ ಭಾಗವಹಿಸಿದ್ದರು

Owned, Printed and published by **ANILKUMAR H** from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at **MAA FRIENDS PRINTING PRESS,** Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: **ANILKUMAR H**